೧೪ ಕ್ಷಿಯಾಗಿ ಮಾಡಿದ ಕ್ರಿಸ್ತ ಯೇಸುವು, ಇವರ ಮುಂದೆ ನಿನಗೆ ಆಜ್ಞಾಪಿಸುವದೇನಂದರೆ— ನೀನು [1]ಆಜ್ಞೆ
ಯನ್ನು ನಿರ್ಮಲವಾಗಿಯೂ ನಿರ್ದೋಷವಾಗಿಯೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯ
೧೫ ವರೆಗೆ ಕೈಕೊಳ್ಳ ಬೇಕು. [2]ಅದನ್ನು ಸ್ವಂತ ಕಾಲಗಳಲ್ಲಿ ಭಾಗ್ಯವುಳ್ಳ ಏಕ ಪ್ರಭುವು, ಅರಸುಗಳ ಅರಸನು,
೧೬ [3]ಕರ್ತರ ಕರ್ತನು, ಒಬ್ಬನೇ ಅಮರತ್ವವುಳ್ಳವನು, ಅಪ್ರವೇಶ್ಯವಾದ ಬೆಳಕಿನಲ್ಲಿ ವಾಸ ಮಾಡಿ, ಮನುಷ್ಯರಲ್ಲಿ
ಯಾರಿಗೂ ಕಾಣಿಸದೆ, ಕಾಣಿಸ ಕೂಡದೆ, ಇರುವವನು ತೋರಿಸುವನು. ಅವನಿಗೆ ಮಾನವೂ ನಿತ್ಯ ತ್ರಾ
ಣವೂ ಆಗಲಿ. ಆಮೆನ್.
೧೭ ಈಗಿನ ಲೋಕದ ಐಶ್ವರ್ಯವಂತರಿಗೆ, ಉನ್ನತವಾದವುಗಳ ಮೇಲೆ ಮನಸ್ಸಿಡದೆ, [4]ಅಸ್ಥಿರವಾದ ಐಶ್ವರ್ಯದಲ್ಲಿ
ಅಲ್ಲ, ಐಶ್ವರ್ಯವಾಗಿ ನಮಗೆ ಎಲ್ಲವನ್ನು [5]ಅನುಭವಿಸುವದಕ್ಕೆ ದಯಪಾಲಿಸುವ ಜೀವವುಳ್ಳ ದೇವರಲ್ಲಿಯೇ
೧೮ ನಿರೀಕ್ಷಿಸಿ, ಉಪಕಾರಿಗಳೂ, ಸತ್ಕ್ರಿಯೆಗಳಲ್ಲಿ ಐಶ್ವರ್ಯವಂತರೂ, ಧರ್ಮಿಷ್ಠರೂ, ಅನ್ಯೋನ್ಯ ಪ್ರಿಯರೂ,
೧೯ ಆಗಿದ್ದು, [6]ನಿತ್ಯಜೀವವನ್ನು ಹಿಡಿದು ಕೊಳ್ಳುವ ಹಾಗೆ, ಬರುವ ಕಾಲಕ್ಕಾಗಿ ತಮಗೆ ಒಳ್ಳೇ [7]ಅಸ್ತಿವಾರ
ವನ್ನು ಇಟ್ಟು ಕೊಳ್ಳ ಬೇಕೆಂದು, ಆಜ್ಞಾಪಿಸು.
೨೦ ಓ ತಿಮೊಥೆಯನೇ! ನಿನಗೆ [8]ಒಪ್ಪಿಸಲ್ಪಟ್ಟದ್ದನ್ನು ಕಾಪಾಡು. ಅಪಭ್ರಷ್ಟವಾದ ವ್ಯರ್ಥ ಶಬ್ದಗಳಿಗೂ, ಸುಳ್ಳು
೨೧ ಹೆಸರುಳ್ಳ [9]ಜ್ಞಾನದ ತರ್ಕಗಳಿಗೂ ದೂರವಾಗಿರು. ಈ ಜ್ಞಾನವನ್ನು ಕೆಲವರು ಹೇಳಿ ಕೊಂಡು, ವಿಶ್ವಾಸದ
ವಿಷಯದಲ್ಲಿ ತಪ್ಪಿದರು. ಕೃಪೆಯು ನಿನ್ನ ಸಂಗಡ ಇರಲಿ. ಆಮೆನ್.

---

1. ಆಜ್ಞೆ ಎಂಬುವದು ದಿವ್ಯ ಸತ್ಯಗಳನ್ನು ಕುರಿತ ಸನ್ಮಾರ್ಗಕ್ಕೆ ತಕ್ಕ ಕಟ್ಟಳೆಯನ್ನು ಕುರಿತದ್ದೆಂದು ತೋರುತ್ತದೆ. (೧. ೫.)

2. ಯೇಸು ಕ್ರಿಸ್ತನ ಪ್ರತ್ಯಕ್ಷತೆಯು ಮಹಾ ದೇವರು ಕುರಿತ ಕಾಲದಲ್ಲಿ ಸಂಭವಿಸುವದು. ಆ ದಿವಸದಲ್ಲಿ ತಮ್ಮ ಉಗ್ರಾಣಿಕ ಉದ್ಯೋಗವನ್ನು ಕುರಿತು ಸಂತೋಷವಾಗಿ ಲೆಖ್ಖ ಒಪ್ಪಿಸುವ ಉತ್ತಮ ಬೋಧಕರು ಈಗ ದಿವ್ಯ ಸತ್ಯಕ್ಕೆ ಅನುಸಾರವಾಗಿ ಅಪರಾಧವೂ ಕಳಂಕವೂ ಇಲ್ಲದವರಾಗಿ ನಡಿಯ ತಕ್ಕದ್ದು.

3. ದೇವರಾಗಿರುವ ತಂದೆಗೆ ತಕ್ಕ ಈ ಹೆಸರುಗಳು, ದೇವರಾಗಿರುವ ಕುಮಾರನಿಗೂ ಹೇಳಲ್ಪಡುತ್ತವೆ. (ಪ್ರಕಟ. ೧೭. ೧೪; ೧೯. ೧೬.)

4. ಐಶ್ವರ್ಯವನ್ನೂ ಅದನ್ನು ಅನುಭವಿಸುವದನ್ನೂ ಕುರಿತು ಚನ್ನಾಗಿ ಆಲೋಚಿಸಿದರೆ, ಅದು ಅಸ್ಥಿರವಾದದ್ದೆಂದು ನಿರ್ಣಯಿಸ ಬೇಕು. (ಸಾಮತಿ. ೨೩. ೪, ೫.)

5. ಕರುಣೆಯುಳ್ಳ ದೇವರು ದಯಪಾಲಿಸುವ ಐಶ್ವರ್ಯದಿಂದ ಮತ್ತೊಬ್ಬರಿಗೆ ಮೇಲು ಮಾಡುವದೇ ಅದನ್ನು ಅನುಭವಿಸುವ ಉತ್ತಮ ರೀತಿಯು. (೧೮. ವ.)

6. ನಿತ್ಯಜೀವ ಎಂಬುವದಕ್ಕೆ ಅನೇಕ ಮುಖ್ಯ ಕೈಬರಹದ ಪ್ರತಿಗಳಲ್ಲಿ ನಿಜವಾದ ಜೀವ ಎಂಬದಾಗಿ ಉಂಟು. (ಲೂಕ. ೧೨. ೧೪, ೧೫. ವಚನಗಳ ವ್ಯಾಖ್ಯಾನ ನೋಡ ಬೇಕು.)

7. (ಲೂಕ. ೧೬. ೯—೧೩. ವಚನಗಳ ವ್ಯಾಖ್ಯಾನ ನೋಡ ಬೇಕು.) ಪ್ರೀತಿಯ ಕ್ರಿಯೆಗಳು ಬರುವ ಕಾಲದಲ್ಲಿ ಸುಖವನ್ನೂ ಭಾಗ್ಯವನ್ನೂ ಹೊಂದುವದಕ್ಕೆ ಒಳ್ಳೇ ಆಧಾರವಾಗಿರುತ್ತವೆ. ಯಾಕಂದರೆ ದೇವರು ಒಬ್ಬೊಬ್ಬನಿಗೂ ಅವನವನ ಕ್ರಿಯೆಗಳಿಗೆ ತಕ್ಕ ಫಲವನ್ನು ಕೊಡುವನು. (ಪ್ರಕಟ. ೨. ೨೩.)

8. ಶುದ್ಧ ಸುವಾರ್ತೆಯ ಸತ್ಯ ಬೋಧನೆಗಳು ತಿಮೊಥೆಯನಿಗೆ ಒಂದು ಬೊಕ್ಕಸದೋಪಾದಿಯಾಗಿ ಒಪ್ಪಿಸಲ್ಪಟ್ಟ ದ್ರವ್ಯವಾಗಿತ್ತು. ಅದನ್ನು ಮತ್ತೊಬ್ಬರಿಗೆ ಕೊಡುವದಕ್ಕಾಗಿಯೇ ಅವನಿಗೆ ಒಪ್ಪಿಸಲ್ಪಟ್ಟಿತು. (೨ ತಿಮೊ. ೧. ೧೨, ೧೪.)

9. ಕ್ರಿಸ್ತನ ಮತವಾದ ಸತ್ಯಮಾರ್ಗವೇ ನಿಜವಾದ ಜ್ಞಾನವು. (೧ ಕೊರಿ. ೧೩. ೮.) ಅದಕ್ಕೆ ವಿರೋಧವಾಗಿರುವದು ಜ್ಞಾನವೆಂದು ಸುಳ್ಳು ಹೆಸರುಳ್ಳ ಅಭಿಪ್ರಾಯಗಳೇ. ಅದು ತಪ್ಪಾದ ವ್ಯರ್ಥ ಮಾತುಗಳಿಂದ ಸುವಾರ್ತೆಯ ಸತ್ಯವನ್ನು ವಿರೋಧಿಸುತ್ತದೆ. ಈ ಸುಳ್ಳು ಮತವು ಆ ಕಾಲದಲ್ಲಿಯೇ ಸಭೆಯಲ್ಲಿ ಹೊಕ್ಕು ತರುವಾಯ ಲೋಕಜ್ಞಾನಿಗಳಾದ ವೇದಭ್ರಷ್ಟರ ಮೂಲಕವಾಗಿ ಅಧಿಕವಾದ ಕೇಡನ್ನು ಉಂಟು ಮಾಡಿತು. ಅನೇಕರು ವಿಶ್ವಾಸಮಾರ್ಗವನ್ನು ಬಿಟ್ಟು ತೊಲಗುವ ಹಾಗೆ ಮಾಡಿದ ಈ ವಿಪರೀತ ಜ್ಞಾನವಾದಕ್ಕೆ ತೊಲಗುವ ಹಾಗೆ ಪೌಲನು ತಿಮೊಥೆಯನಿಗೆ ಪ್ರೀತಿಯಿಂದ ಬುದ್ಧಿ ಹೇಳಿ, ದೇವರ ಆಶೀರ್ವಾದದಿಂದ ಅವನನ್ನು ಹರಸಿ, ಪತ್ರಿಕೆಯನ್ನು ಮುಗಿಸುತ್ತಾನೆ.

# THE SECOND EPISTLE OF PAUL THE APOSTLE TO TIMOTHY.

## ಅಪೊಸ್ತಲನಾದ ಪೌಲನು ತಿಮೊಥೆಯನಿಗೆ ಬರೆದ ಎರಡನೇ ಪತ್ರಿಕೆಯ ಪೀಠಿಕೆ.

ಅಪೊಸ್ತಲನಾದ ಪೌಲನು ರೋಮಪುರಿಯಲ್ಲಿ ಸೆರೆಮನೆಯಲ್ಲಿದ್ದು, ರಕ್ತಸಾಕ್ಷಿಗಳ ಮರಣವು ತನಗೆ ಅತಿ ಶೀಘ್ರವಾಗಿ ಪ್ರಾಪ್ತಿಸುವದೆಂದು ನಿರೀಕ್ಷಿಸುತ್ತಾ ಇದ್ದ ಕಾಲದಲ್ಲಿ ಈ ಪತ್ರಿಕೆಯು ಬರಿಯಲ್ಪಟ್ಟಿತೆಂದು ತೋರುತ್ತದೆ. (೧. ೮, ೧೬, ೧೭; ೪. ೬.) ಅಪೊಸ್ತಲರ ಕ್ರಿಯೆಗಳ ೨೮ನೇ ಸಂಧಿಯಲ್ಲಿ, ಅವನು ಸೆರೆಯಲ್ಲಿದ್ದನೆಂದು ಹೇಳಲ್ಪಟ್ಟದ್ದನ್ನು ಆಧಾರ ಮಾಡಿ ಕೊಂಡು, ಅವನು ಸಾಯುವ ಮಟ್ಟಿಗೂ ಅದೇ ಸೆರೆಯಲ್ಲಿದ್ದನೆಂದೂ, ಆ ಕಾಲದಲ್ಲಿಯೇ ಈ ಪತ್ರಿಕೆ ಬರಿಯಲ್ಪಟ್ಟಿತೆಂದೂ ಕೆಲವರು ನೆನಸುತ್ತಾರೆ. ಆದರೆ ತಿಮೊಥೆಯನ ಮೊದಲನೇ ಪತ್ರಿಕೆಯ ಪೀಠಿಕೆಯಲ್ಲಿ ಹೇಳಿದ ನ್ಯಾಯಗಳನ್ನೂ ಈ ಪತ್ರಿಕೆಯಲ್ಲಿರುವ ನ್ಯಾಯಗಳನ್ನೂ ಯೋಚಿಸಿ ನೋಡುವಾಗ, ಅವರ ಅಭಿಪ್ರಾಯವು ಸರಿಯಲ್ಲವೆಂದು ತೋರುವದು. "ನಾನು ತ್ರೋಯದಲ್ಲಿ ಕರ್ಪನ ಹತ್ತರ ಬಿಟ್ಟು ಬಂದ ಮೇಲಂಗಿಯನ್ನೂ, ಪುಸ್ತಕಗಳನ್ನೂ, ಮುಖ್ಯವಾಗಿ ತೊಗಲುಕಾಗದಗಳನ್ನೂ ಬರುವಾಗ ತೆಗೆದು ಕೊಂಡು ಬಾ" ಎಂದು ೪. ೧೩ರಲ್ಲಿಯೂ, "ಎರಸ್ತನು ಕೊರಿಂಥದಲ್ಲಿ ನಿಂತನು, ತ್ರೊಫಿಮನನ್ನು ಅಸೌಖ್ಯವಾಗಿ ಮಿಲೇತದಲ್ಲಿ ಬಿಟ್ಟೆನು" ಎಂದು ೪. ೨೦ರಲ್ಲಿಯೂ, ಹೇಳಿರುವದನ್ನು ಯೋಚಿಸುವಾಗ, ಇವು ಅಪೊಸ್ತಲರ ಕ್ರಿಯೆಗಳ ೨೮ನೇ ಸಂಧಿಯಲ್ಲಿ ಹೇಳಲ್ಪಟ್ಟ ಕಾಲದಲ್ಲಿ ಬರೆಯಲ್ಪಡಲಿಲ್ಲವೆಂದು ಪ್ರತ್ಯಕ್ಷವಾಗಿ ತೋರುತ್ತದೆ. ಅದಕ್ಕೆ ಆರು ವರುಷಕ್ಕೆ ಮುಂಚೆ ಪೌಲನು ಕೊರಿಂಥ, ತ್ರೋಯ, ಮಿಲೇತ ಎಂಬ ಪಟ್ಟಣಗಳಿಗೆ ಹೋಗಿದ್ದನೆಂದೂ, (ಅಪೊ. ಕ್ರಿ. ೨೦. ೫, ೬, ೧೭.) ಆ ಪ್ರಯಾಣದಲ್ಲಿಯೂ ಅದರ ತರುವಾಯದ ಕಾಲದಲ್ಲಿಯೂ ತಿಮೊಥೆಯನು ಪೌಲನ ಸಂಗಡಲೇ ಇದ್ದನೆಂದೂ, ಯೆರೂಸಲೇಮು ಪಟ್ಟಣದಲ್ಲಿ ಪೌಲನು ಶತ್ರುಗಳಿಂದ ಹಿಡಿಯಲ್ಪಟ್ಟಾಗ ತ್ರೊಫಿಮನು ಅವನ ಸಂಗಡ ಇದ್ದದರಿಂದ (ಅಪೊ. ಕ್ರಿ. ೨೧. ೨೯.) ಮಿಲೇತದಲ್ಲಿ ಅವನು ನಿಲ್ಲಲಿಲ್ಲವೆಂಬುವದು ನಿಶ್ಚಯವಾಗಿಯೂ, ಚರಿತ್ರೆಯಿಂದ ಸ್ಪಷ್ಟವಾಗಿ ಕಾಣುವದರಿಂದ, ಈ ವರ್ತಮಾನಗಳು ಪೌಲನು ಮೊದಲನೇ ಸಾರಿ ಸೆರೆಯವನಾಗಿದ್ದ ಕಾಲದ ತರುವಾಯ ಬೇರೆ ಕಾಲದಲ್ಲಿ ಮಾಡಿದ ಒಂದು ಪ್ರಯಾಣದಲ್ಲಿ ನಡೆದಿರ ಬೇಕೆಂಬ ಉದ್ದೇಶಿಸ ತಕ್ಕದ್ದಾಗಿದೆ.

ಮತ್ತು ಈ ಅಭಿಪ್ರಾಯವನ್ನು ಸ್ಥಾಪಿಸುವದಕ್ಕೆ ತಕ್ಕ ಬೇರೆ ಕೆಲವು ಸಂಗತಿಗಳನ್ನು ಇದರಲ್ಲಿ ಕಾಣ ಬಹುದು. ಪೌಲನು ಮೊದಲನೇ ಸಾರಿ ಸೆರೆಯಲ್ಲಿದ್ದಾಗ ಬರೆದ ಪತ್ರಿಕೆಗಳಲ್ಲಿ ಅವನ ಸಂಗಡ ಇದ್ದರೆಂದು ಹೇಳಲ್ಪಟ್ಟ ಸ್ನೇಹಿತರು ಈ ಪತ್ರಿಕೆ ಬರಿಯಲ್ಪಟ್ಟ ಕಾಲದಲ್ಲಿ ಇರಲಿಲ್ಲ. (೪. ೧೦, ೧೧. ಕೊಲೊ. ೪. ೧೦, ೧೪.) ಇದು ಅಲ್ಲದೆ ಮೊದಲನೇ ಬಂಧನದಲ್ಲಿ ಅವನಿಗೆ ಉಂಟಾಗಿದ್ದ ಉಪದ್ರಕ್ಕಿಂತ ಈಗ ಅಧಿಕ ಉಪದ್ರ ಉಂಟಾಗಿತ್ತು. (೧. ೧೭, ೧೮. ಅಪೊ. ಕ್ರಿ. ೨೮. ೩೦, ೩೧. ಫಿಲಿ. ೧. ೧೩.) ಮೊದಲನೇ ಸಾರಿ ತನಗೆ ಬಿಡುಗಡೆ ಉಂಟಾಗುವದೆಂದು ನಂಬಿಕೆ ಉಂಟಾಗಿತ್ತು. ಈಗ ಅಂಥಾ ನಂಬಿಕೆ ಉಂಟಾಗಿತ್ತೆಂದು ತೋರಲಿಲ್ಲ. (೪. ೬. ಫಿಲಿ. ೧. ೨೫; ೨. ೨೪. ಫಿಲೆಮೋ. ೨೨. ವ.)

ಅಪೊಸ್ತಲನಾದ ಪೌಲನು ಎರಡನೇ ಸಾರಿ ರೋಮಪುರಿಯಲ್ಲಿ ಸೆರೆಯವನಾಗಿ ಬಂದ ಸ್ವಲ್ಪ ಕಾಲದ ತರುವಾಯ ಹೆಚ್ಚುಕಡಿಮೆ ೬೬ನೇ ವರುಷದಲ್ಲಿ ಈ ಪತ್ರಿಕೆಯನ್ನು ಬರೆದನೆಂದು ತೋರುತ್ತದೆ. ಆ ಕಾಲದಲ್ಲಿ ತಿಮೊಥೆಯನು ಇದ್ದ ಸ್ಥಳವನ್ನು ಗೊತ್ತಾಗಿ ಹೇಳುವದಕ್ಕೆ ಹೇತುವೆ ಇಲ್ಲ; ಎಫೆಸ ಪಟ್ಟಣದಲ್ಲಾದರೂ ಚಿಕ್ಕ ಆಸ್ಯದ ಬೇರೊಂದು ಪಟ್ಟಣದಲ್ಲಾದರೂ ಇದ್ದಿರ ಬಹುದು. ಅದರಿಂದ ರೋಮಪುರಿಗೆ ತ್ರೋಯದ ಮಾರ್ಗವಾಗಿ ಹೋಗ ಬೇಕಾಗಿರುವದು. (೪. ೧೩.)

ಪೌಲನು ತನಗೆ ಆದರಣೆ ಹೇಳ ತಕ್ಕ ಇಷ್ಟರು ಒಬ್ಬರೂ ಇಲ್ಲವೆಂಬ ಯೋಚನೆಯಿಂದ ಈ ಪತ್ರಿಕೆಯನ್ನು ಬರೆದನೆಂದು ತೋರುತ್ತದೆ. ಆದ ಕಾರಣ ಅವನು ಮಾರ್ಕನನ್ನು ಕರಕೊಂಡು ಶೀಘ್ರವಾಗಿ ಬರ ಬೇಕೆಂದು ತಿಮೊಥೆಯನಿಗೆ ಆಜ್ಞಾಪಿಸುತ್ತಾನೆ. (೧. ೧೫; ೪. ೯—೧೧.) ಆದರೆ ಅವನನ್ನು ಮುಖಾಮುಖವಾಗಿ ಕಂಡು, ಬೇಕಾದ ಬುದ್ಧಿಮತಿಗಳನ್ನು ಹೇಳ ಬಹುದೆಂಬ ನಿಶ್ಚಯವು ಅವನಿಗೆ ಇಲ್ಲದ್ದರಿಂದ, ಅವನ ಸ್ಥಿತಿಗೆ ತಕ್ಕ ಬುದ್ಧಿಬೋಧನೆಗಳನ್ನು ತಂದೆಗಿರುವ ವಾತ್ಸಲ್ಯದಿಂದ ಈ ಪತ್ರಿಕೆಯನ್ನು ವಿಸ್ತಾರವಾಗಿ ಬರೆದು ತಿಳಿಸುತ್ತಾನೆ. ಕ್ರಿಸ್ತನ ಮಾರ್ಗದ ಪ್ರಧಾನ ಸತ್ಯೋಪದೇಶಗಳನ್ನು ವಿರೋಧಿಸಿದ ಕಳ್ಳಬೋಧಕರನ್ನು ಎದುರಿಸ ಬೇಕೆಂದೂ, ಕ್ರಿಸ್ತನ ದಿವ್ಯ ಸತ್ಯಗಳನ್ನು ಧೈರ್ಯವಾಗಿ ಸಾರ ಬೇಕೆಂದೂ, ಅದರಿಂದ ಉಂಟಾಗುವ ಉಪದ್ರವನ್ನು ತಾಳ್ಮೆಯಾಗಿ ಸಹಿಸ ಬೇಕೆಂದೂ, ದೇವರ ಉತ್ತಮ ದಾಸರಿಗೆ ಸಂಭವಿಸುವ ಉಪದ್ರದಲ್ಲಿ ಅವನು ಸಹ ಉತ್ಸಾಹದಿಂದ ಒಡಂಬಡ ಬೇಕೆಂದೂ, ಈ ಪ್ರಕಾರ ತನ್ನ ದಿವ್ಯ ಸೇವೆಯನ್ನು ಎಲ್ಲಾ ಜಾಗ್ರತೆಯಿಂದ ಈಡೇರಿಸಿ ಸುವರ್ಣಲೋಕವನ್ನು ಸೇರ ಬೇಕೆಂದೂ, ಮಹಾ ಪ್ರೀತಿಯಿಂದಲೂ ಭಕ್ತಿವೈರಾಗ್ಯದಿಂದಲೂ ಬುದ್ಧಿ ಹೇಳುತ್ತಾನೆ. ಈ ಪತ್ರಿಕೆಯಲ್ಲಿ ಪೌಲನ ಭಕ್ತಿಯೂ, ವಿಶ್ವಾಸದ ಧೀರತ್ವವೂ, ಮರಣವನ್ನು ಕುರಿತು ಅವನಲ್ಲಿದ್ದ ಆಲೋಚನೆಯೂ, ಪರಮ ಪದವಿಯಲ್ಲಿ ಸೇರುವದನ್ನು ಕುರಿತು ಅವನಲ್ಲಿದ್ದ ನಂಬಿಕೆಯೂ ಸ್ಪಷ್ಟವಾಗಿ ತೋರುತ್ತವೆ.

# THE SECOND EPISTLE OF PAUL THE APOSTLE TO TIMOTHY.

## ಅಪೊಸ್ತಲನಾದ ಪೌಲನು
# ತಿಮೊಥೆಯನಿಗೆ ಬರೆದ ಎರಡನೇ ಪತ್ರಿಕೆ.

ಆಶೀರ್ವಾದವು; ತಿಮೊಥೆಯನನ್ನು ಪ್ರೀತಿಯಾಗಿ ನೆನಸಿದ್ದು; ಪ್ರಯಾಸವನ್ನೂ ಉಪದ್ರವನ್ನೂ ಸಹಿಸಿ ಕೊಳ್ಳುವಂತೆ ಆಜ್ಞಾಪಿಸಿದ್ದು.

1. [1]ದೇವರ ಚಿತ್ತದಿಂದ, ಕ್ರಿಸ್ತ ಯೇಸುವಿನಲ್ಲಿರುವ ಜೀವದ ವಾಗ್ದತ್ತದ ಪ್ರಕಾರ, ಯೇಸು ಕ್ರಿಸ್ತನ [2]ಅಪೊ
೨ ಸ್ತಲನಾದ ಪೌಲನು ಪ್ರಿಯ ಮಗನಾದ ತಿಮೊಥೆಯನಿಗೆ—ತಂದೆಯಾದ ದೇವರಿಂದಲೂ, ನಮ್ಮ ಕರ್ತ
ನಾದ ಕ್ರಿಸ್ತ ಯೇಸುವಿನಿಂದಲೂ, ಕೃಪೆಯೂ ಕರುಣೆಯೂ ಸಮಾಧಾನವೂ ಆಗಲಿ.
೩ ನಾನು ರಾತ್ರಿ ಹಗಲು ಮಾಡುವ ಪ್ರಾರ್ಥನೆಗಳಲ್ಲಿ ಎಡೆ ಬಿಡದೆ ನಿನ್ನನ್ನು ನೆನಸುವದರಿಂದ, ಶುದ್ಧ ಮನ
೪ ಸ್ಸಾಕ್ಷಿಯಾಗಿ ಹಿರಿಯರ ಕಾಲದಿಂದ ಸೇವಿಸುವ ದೇವರಿಗೆ ಸ್ತೋತ್ರ ಮಾಡುತ್ತೇನೆ. [3]ನಿನ್ನ ಕಣ್ಣೀರನ್ನು
ನೆನಪು ಮಾಡಿ ಕೊಂಡು, ನಾನು ಸಂತೋಷಪೂರಿತನಾಗುವ ಹಾಗೆ, ನಿನ್ನನ್ನು ನೋಡ ಇಚ್ಛೈಸುತ್ತೇನೆ.
೫ [4]ನಿನ್ನಲ್ಲಿರುವ ಕಪಟವಿಲ್ಲದ ವಿಶ್ವಾಸವನ್ನು ಜ್ಞಾಪಕ ಮಾಡಿ ಕೊಳ್ಳುತ್ತೇನಲ್ಲ? ಅದು ಮೊದಲು ನಿನ್ನ ಅಜ್ಜಿ
ಯಾದ ಲೋವಿಯಲ್ಲಿ, ಮತ್ತು ನಿನ್ನ ತಾಯಿಯಾದ [5]ಯುನೀಕೆಯಲ್ಲಿ, ವಾಸವಾಗಿತ್ತು. ಅದು ನಿನ್ನಲ್ಲಿ
ಸಹ ಇರುತ್ತದೆಂದು ನಂಬುತ್ತೇನೆ.

1. ತಿಮೊಥೆಯನ ಮೇಲೆ ತನಗಿದ್ದ ಪ್ರೀತಿಯನ್ನೂ, ಅವನನ್ನು ನೋಡುವದಕ್ಕೆ ತನಗಿದ್ದ ಅಪೇಕ್ಷೆಯನ್ನೂ ಪೌಲನು ಹೇಳಿ, (೧. ೧—೫.) ಕ್ರಿಸ್ತನ ನಿಮಿತ್ತವೂ ಆತನ ಸತ್ಯದ ನಿಮಿತ್ತವೂ ತನಗೆ ಸಂಭವಿಸಿದ ಉಪದ್ರ ನಿಂದೆಗಳಿಗೆ ಅವನು ಸಹ ಒಡಂಬಡ ಬೇಕೆಂದು ಆಜ್ಞಾಪಿಸಿ, (೬—೧೪. ವ.) ಉಪದ್ರಕಾಲದಲ್ಲಿ ಎಲ್ಲರೂ ಮಾರ್ಗ ತಪ್ಪಿ ಹೋದರೂ, ಒಬ್ಬನು ಮಾತ್ರ ಜಾರಿ ಹೋಗದೆ ಸ್ಥಿರವಾಗಿದ್ದದ್ದನ್ನು ತೋರಿಸುತ್ತಾನೆ. (೧೫—೧೮. ವ.) ಇದಲ್ಲದೆ ತಿಮೊಥೆಯನು ಸ್ಥಿರವಾಗಿದ್ದು, ಅಪೊಸ್ತಲರು ಬೋಧಿಸಿದ ದಿವ್ಯ ಸತ್ಯಗಳನ್ನು ಮತ್ತೊಬ್ಬರಿಗೆ ಬೋಧಿಸ ತಕ್ಕ ಏರ್ಪಾಡುಗಳನ್ನು ಮಾಡ ಬೇಕೆಂದೂ, (೨. ೧, ೨.) ಅವನು ದೇವರ ಸೇವೆ ಮಾಡುವದರಲ್ಲಿ ರಾಣುವೆಯವನಿಗೆ ತಕ್ಕ ಧೈರ್ಯವೂ, ಮಲ್ಲಯುದ್ಧ ಮಾಡುವವನಿಗೆ ತಕ್ಕ ಸಾಧನೆಯೂ, ಪೈರು ಮಾಡುವವನಿಗೆ ತಕ್ಕ ಉತ್ಸಾಹವೂ ಉಳ್ಳವನಾಗಿರ ಬೇಕೆಂದೂ, (೩—೭. ವ.) ತೋರಿಸಿ, ಸುವಾರ್ತೆಯ ಸತ್ಯಗಳಿಂದ ಅವನನ್ನು ಆದರಿಸಿ, (೮—೧೩. ವ.) ಕಳ್ಳಬೋಧಕರಿಗೆ ತೊಲಗಿ ದೇವರ ಸೇವೆಯನ್ನು ಯಥಾರ್ಥವಾಗಿ ಈಡೇರಿಸುವ ಹಾಗೆ ಬುದ್ಧಿ ಹೇಳುತ್ತಾನೆ. (೧೪—೨೬. ವ.)

2. (ರೋಮಾ. ೧. ೩, ೪. ಗಲಾ. ೧. ೧. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.) ಕ್ರಿಸ್ತ ಯೇಸುವಿನಲ್ಲಿರುವ ಜೀವವನ್ನು ಕುರಿತ ವಾಗ್ದತ್ತವನ್ನು ಪ್ರಕಟ ಮಾಡುವದೇ ಅಪೊಸ್ತಲ ಉದ್ಯೋಗವನ್ನು ಹೊಂದಿದವರ ಮುಖ್ಯ ಕೆಲಸವು.

3. ಕೆಲವು ತಿಂಗಳ ಮುಂಚೆ ಒಂದು ವೇಳೆ ಮಿಲೇತ ಪಟ್ಟಣದಲ್ಲಿ ತಿಮೊಥೆಯನು ಪೌಲನನ್ನು ಕಡೆಯಲ್ಲಿ ಬಿಟ್ಟಗಲಿದಾಗ ದುಃಖದಿಂದ ತುಂಬಿದವನಾಗಿ ಕಣ್ಣೀರು ಬಿಟ್ಟು ಅತ್ತಿರುವನು. ಇಷ್ಟು ಪ್ರೀತಿಯುಳ್ಳ ಮಗನನ್ನು ತಂದೆಯ ಹಾಗಿದ್ದ ಪೌಲನು ರಾತ್ರಿ ಹಗಲು ನೆನಸಿ ಅವನಿಗೋಸ್ಕರ ಪ್ರಾರ್ಥನೆ ಮಾಡಿದ್ದೂ, ಅವನನ್ನು ನೋಡ ಆಶೆ ಪಟ್ಟದ್ದೂ ಸಹಜವಾಗಿದೆ.

4. ಕಪಟವಿಲ್ಲದ ವಿಶ್ವಾಸವು ಸತ್ಕ್ರಿಯೆಗಳಿಂದ ತೋರ ಬರುತ್ತದೆ.

5. ತಿಮೊಥೆಯನ ತಾಯಿಯಾದ ವಿಶ್ವಾಸವುಳ್ಳ ಯೆಹೂದ್ಯ ಸ್ತ್ರೀಯಾಗಿದ್ದ (ಅಪೊ. ಕ್ರಿ. ೧೬. ೧.) ಯುನೀಕೆಯು ತನ್ನ ಮಗನಿಗೆ ಬಾಲ್ಯದಲ್ಲಿಯೇ ದೇವರ ವಾಕ್ಯವೆಂಬ ಹಾಲನ್ನು ಕುಡಿಸಿದಳು. (೩. ೧೫.) ಅವಳಿಗೆ ಅವಳ ತಾಯಿಯಾದ ಲೋವಿಯು ಬಾಲ್ಯದಲ್ಲಿ ವೇದವಾಕ್ಯಗಳನ್ನು ಕಲಿಸಿರುವಳು. ತಿಮೊಥೆಯನು ಕ್ರಿಸ್ತನ ಮಾರ್ಗವನ್ನು ಅನುಸರಿಸಿದಾಗ ಅವರಿಬ್ಬರೂ ಅದನ್ನು ಅನುಸರಿಸಿರುವರು. ತಿಮೊಥೆಯನ ಕುಟುಂಬವು ದೇವಭಕ್ತ ಕುಟುಂಬಗಳಿಗೆ ಮಾದ್ರಿಯಾಗಿದೆ. ತಾಯಿಗಳು ತಮ್ಮ ಮಕ್ಕಳನ್ನು ಬೆಳಿಸ ತಕ್ಕ ವಿಧವು ಇದರಲ್ಲಿ ಚನ್ನಾಗಿ ತೋರುತ್ತದೆ.



೬ ಈ ಕಾರಣದಿಂದ [1]ನನ್ನ ಕೈಯಿಡುವಿಕೆಯಿಂದ ನಿನ್ನಲ್ಲಿರುವ ದೇವರ ವರವನ್ನು ಉರಿಯ ಮಾಡ ನಿನ್ನನ್ನು
೭ ಎಚ್ಚರಿಸುತ್ತೇನೆ. ಯಾಕಂದರೆ ದೇವರು ಹೇಡಿತನದ ಆತ್ಮವನ್ನಲ್ಲ, ಬಲ, ಪ್ರೀತಿ, [2]ಮನಃಸ್ವಸ್ಥಗಳ ಆತ್ಮ
ವನ್ನು ನಮಗೆ ಕೊಟ್ಟಿದ್ದಾನೆ.
೮ ಹೀಗಿರುವದರಿಂದ ನಮ್ಮ ಕರ್ತನ ಸಾಕ್ಷಿಗೂ, ಅವನ ಬಂಧದವನಾದ ನನಗೂ, ನಾಚಿಕೆ ಪಡದೆ, [3]ದೇವರ
೯ ಬಲದಿಂದ ಸುವಾರ್ತೆಯ ಶ್ರಮೆಗಳಲ್ಲಿ ಪಾಲುಗಾರನಾಗಿರು. ಅವನು ನಮ್ಮನ್ನು ರಕ್ಷಿಸಿ, ನಮ್ಮ ಕ್ರಿಯೆಗಳ
ಪ್ರಕಾರವಲ್ಲ, ತನ್ನ ನಿರ್ಣಯದ ಪ್ರಕಾರವೂ, ಯುಗ ಕಾಲಗಳ ಮುಂಚೆ ಕ್ರಿಸ್ತ ಯೇಸುವಿನಲ್ಲಿ ನಮಗೆ
೧೦ [4]ಕೊಡಲ್ಪಟ್ಟಂಥ, [5]ಮರಣವನ್ನು ಲಯ ಮಾಡಿ, ಸುವಾರ್ತೆಯಿಂದ ಜೀವವನ್ನೂ ನಿರ್ಲಯವನ್ನೂ ಬೆಳ
ಕಿಗೆ ತಂದ, ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯಿಂದ ಈಗಲೇ ಪ್ರತ್ಯಕ್ಷವಾದಂಥ, ಕೃಪೆಯ
೧೧ ಪ್ರಕಾರವೂ, ಪರಿಶುದ್ಧ ಕರೆಯುವಿಕೆಯಿಂದ ನಮ್ಮನ್ನು ಕರೆದಿದ್ದಾನೆ. ಆ ಸುವಾರ್ತೆಗೆ ನಾನು ಸಾರುವ
೧೨ ವನಾಗಿಯೂ, ಅಪೊಸ್ತಲನಾಗಿಯೂ, ಜನಾಂಗಗಳ ಬೋಧಕನಾಗಿಯೂ, ನೇಮಿಸಲ್ಪಟ್ಟೆನು. ಆದ ಕಾ
ರಣ ಇವುಗಳನ್ನು ಸಹಿಸುತ್ತೇನೆ; ಆದಾಗ್ಯೂ ನಾಚಿಕೆ ಪಡುವದಿಲ್ಲ. ಹ್ಯಾಗಂದರೆ ನಾನು ವಿಶ್ವಾಸಿಸಿದವನ
ನ್ನು ಬಲ್ಲೆನು. ಮತ್ತು ನಾನು [6]ಒಪ್ಪಿಸಿದ್ದನ್ನು ಆ ದಿನದ ಮಟ್ಟಿಗೂ ಕಾಪಾಡ ಶಕ್ತನಾಗಿದ್ದಾನೆಂದು ನಿಶ್ಚೈಸಿ
ಕೊಂಡಿದ್ದೇನೆ.
೧೩ ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದಲ್ಲಿಯೂ, ಪ್ರೀತಿಯಲ್ಲಿಯೂ ನನ್ನಿಂದ ಕೇಳಿದ ಸ್ವಸ್ಥ ವಾಕ್ಯಗಳ [7]ಪದ
೧೪ ತಿಯನ್ನು ಹಿಡಿದುಕೋ. [8]ನಿನಗೆ ಒಪ್ಪಿಸಲ್ಪಟ್ಟ ಒಳ್ಳೇ ವರವನ್ನು ನಮ್ಮಲ್ಲಿ ವಾಸ ಮಾಡುವ ಪರಿಶುದ್ಧಾ
ತ್ಮದ ಮೂಲವಾಗಿ ಕಾಪಾಡು.
೧೫ ಫುಗೆಲ್ಲನೂ ಹೆಮೋರ್ಗೆನನೂ ಮೊದಲಾದ [9]ಆಸ್ಯದಲ್ಲಿರುವವರೆಲ್ಲರೂ ನನ್ನನ್ನು ಬಿಟ್ಟು ಹೋದರೆಂಬುವ

1. ತಿಮೊಥೆಯನನ್ನು ದೇವರ ಸೇವೆಗೆ ಪ್ರತಿಷ್ಠೆ ಮಾಡಿದಾಗ, ಅವನ ಮೇಲೆ ಕೈಗಳನ್ನಿರಿಸಿದ ಹಿರಿಯರ ಸಂಘದಲ್ಲಿ ಪೌಲನು ಶ್ರೇಷ್ಠನಾಗಿದ್ದನು. (೧ ತಿಮೊ. ೪. ೧೪. ವಚನದ ವ್ಯಾಖ್ಯಾನ ನೋಡ ಬೇಕು.) ಹೀಗೆ ದಿವ್ಯ ಸೇವೆ ಮಾಡುವದಕ್ಕೆ ತಿಮೊಥೆಯನು ಹೊಂದಿದ ಪರಿಶುದ್ಧಾತ್ಮನ ವರವನ್ನು ಉರಿಯ ಮಾಡಿ ಎಬ್ಬಿಸ ಬೇಕೆಂದು ಪೌಲನು ಆಜ್ಞಾಪಿಸುತ್ತಾನೆ.

2. ಸ್ವಸ್ಥಬುದ್ಧಿ ಎಂಬುವದು ಮೂಲ ಭಾಷೆಯ ತಾತ್ಪರ್ಯದ ಪ್ರಕಾರ ತನ್ನ ಇಚ್ಛೆಗಳನ್ನು ಬಿಗಿ ಹಿಡಿದು ನಡಿಸುವ ಕ್ರಮವನ್ನು ಸೂಚಿಸುತ್ತದೆ. ತಿಮೊಥೆಯನು ಸ್ವಾಭಾವಿಕವಾಗಿ ಅಧೈರ್ಯಶಾಲಿಯಾಗಿರುವನು. ಇನ್ನು ಮೇಲೆ ಅವನು ಹಾಗಿರದೆ, ಸ್ವಸ್ಥಬುದ್ಧಿಯೂ ಧೈರ್ಯವೂ ಉಳ್ಳವನಾಗಿ ನಡಿಯುವ ಹಾಗೆ ಪೌಲನು ಬುದ್ಧಿ ಹೇಳುತ್ತಾನೆ.

3. ದೇವರ ಈ ಬಲವು ರಕ್ಷಣೆಯ ಕಾರ್ಯದಲ್ಲಿ ಚನ್ನಾಗಿ ಪ್ರಕಟವಾಯಿತು. (೯. ವ.) ಈ ಬಲವನ್ನು ಅರಿತವರು ಕರ್ತನ ವಿಷಯ ಸಾಕ್ಷಿ ಕೊಡುವದಕ್ಕಾದರೂ, ಆತನ ನಿಮಿತ್ತ ನಿಂದೆಯನ್ನು ಅನುಭವಿಸುವ ಆತನ ದಾಸರನ್ನು ಕುರಿತಾದರೂ ನಾಚಿಕೆ ಪಡದೆ ಸಕಲ ಉಪದ್ರಗಳನ್ನೂ ಉತ್ಸಾಹದಿಂದ ಸಹಿಸಿ ಕೊಳ್ಳುವರು.

4. ಉಚಿತ ದಾನವಾದ ಈ ರಕ್ಷಣೆಯ ಕೃಪೆಯು ಕ್ರಿಸ್ತನ ಮೂಲಕವಾಗಿ ಆದಿಕಾಲದಲ್ಲಿಯೇ ಕೊಡಲ್ಪಟ್ಟಿತು. ತಕ್ಕ ಕಾಲದಲ್ಲಿ ಅದು ಪೂರ್ಣವಾಗಿ ಪ್ರಕಟವಾಯಿತು. (ಎಫೆ. ೩. ೪—೧೨.)

5. ಕ್ರಿಸ್ತನು ತನ್ನ ಮರಣದಿಂದಲೂ ಪುನರುತ್ಥಾನದಿಂದಲೂ ಮರಣದ ಬಲವನ್ನು ನಾಶ ಮಾಡಿ ತನ್ನ ದಾಸರಿಗೆ ಅದರ ಭಯವಿಲ್ಲದಂತೆ ಮಾಡಿ, (ಇಬ್ರೀ. ೨. ೧೪, ೧೫. ಯೋಹಾ. ೧೧. ೨೫, ೨೬. ೧ ಕೊರಿ. ೧೫. ೨೬, ೫೪—೫೭.) ಜೀವವನ್ನೂ ನಿರ್ಲಯವನ್ನೂ ಸುವಾರ್ತೆಯಿಂದ ಬಹಿರಂಗ ಮಾಡಿದನು. ಆತನ ಪರಿಶುದ್ಧ ಸುವಾರ್ತೆಯ ಮೂಲವಾಗಿ ಆತನ ದಾಸರಿಗುಂಟಾಗುವ ಜೀವವು ಎಂದಿಗೂ ನಾಶವಾಗದ ನಿತ್ಯಜೀವವೇ.

6. ಇದು ಒಂದು ಬೊಕ್ಕಸವನ್ನು ಕುರಿತದ್ದಾಗಿದೆ. ದಾಸನು ದೇವರಿಗೆ ಒಪ್ಪಿಸಿ ಕೊಡುವ ಬೊಕ್ಕಸ ಉಂಟು. ಅದು ಅವನ ಆತ್ಮವೇ. (೪. ೮. ೧ ಪೇತ್ರ. ೪. ೧೯.) ಅದನ್ನು ಆತನು ಕಡೇ ದಿನದ ಮಟ್ಟಿಗೂ ಕಾಪಾಡುವನೆಂದು ಪೌಲನು ತನ್ನ ಸ್ಥಿರವಾದ ನಂಬಿಕೆಯನ್ನು ಹೇಳುತ್ತಾನೆ. (ರೋಮಾ. ೮. ೩೮, ೩೯.)

7. ಪದ್ಧತಿ ಎಂಬುವದು ಮಾದರಿಯನ್ನುಕುರಿತದ್ದು. (೧ ತಿಮೊ. ೧. ೧೬.) ತಿಮೊಥೆಯನು ಪೌಲನ ಬಳಿಯಲ್ಲಿ ಕೇಳಿದ್ದ ಸ್ವಸ್ಥ ವಾಕ್ಯಗಳನ್ನು (೧ ತಿಮೊ. ೧. ೧೫; ೪. ೮, ೯.) ಮಾದರಿಯಾಗಿ ಅಥವಾ ಪ್ರಮಾಣವಾಗಿ ಇಟ್ಟು ಕೊಂಡು ಅವುಗಳ ಪ್ರಕಾರ ನಡೆದರೆ, ಅವನ ಮಾತೂ ಮನಸ್ಸೂ ದಿವ್ಯ ಸತ್ಯಕ್ಕೆ ಅನುಸಾರವಾದವುಗಳಾಗಿರುವವು. ಕ್ರಿಸ್ತ ಯೇಸುವನ್ನು ಹೊಂದಿದ ವಿಶ್ವಾಸದಿಂದಲೂ ಪ್ರೀತಿಯಿಂದಲೂ ಈ ಸ್ವಸ್ಥ ವಾಕ್ಯಗಳನ್ನು ಅನುಸರಿಸುವವರಿಗೆಲ್ಲಾ ಬಹಳ ಪ್ರಯೋಜನ ಉಂಟಾಗುವದು.

8. ಇದು ಸುವಾರ್ತೆಯ ಸತ್ಯವನ್ನು ಕುರಿತದ್ದು. (೧೨. ವಚನದ ವ್ಯಾಖ್ಯಾನ ನೋಡ ಬೇಕು. ೧ ತಿಮೊ. ೬. ೨೦.) ಈ ಬೊಕ್ಕಸವನ್ನು ಕಾಪಾಡುವದಕ್ಕೆ ದೇವರ ಸೇವಕರ ಹೃದಯದಲ್ಲಿ ವಾಸ ಮಾಡುವ ಪರಿಶುದ್ಧಾತ್ಮನ ಅನುಗ್ರಹವು ಅವಶ್ಯವಾಗಿದೆ.

9. ರೋಮಾಯ ಅಧಿಪತಿಯ ಆಳಿಕೆಯಲ್ಲಿರುವ ಆಸ್ಯ ದೇಶದ ಕ್ರೈಸ್ತರಲ್ಲಿ ಒನೆಸಿಫೊರನು, ಫುಗೆಲ್ಲನು, ಹೆಮೋರ್ಗೆನನು

೧೬ ದನ್ನು ಬಲ್ಲಿ. ಒನೆಸಿಫೊರನ ಮನೆಗೆ ಕರ್ತನು ಕರುಣೆ ಮಾಡಲಿ; ಯಾಕಂದರೆ ಅವನು ಅನೇಕ ಸಾರಿ ನನಗೆ
೧೭ [1]ಉಪಶಮನ ಮಾಡಿ, ನನ್ನ ಸಂಕೋಲೆಗೋಸ್ಕರ ನಾಚಿಕೆ ಪಡದೆ, ರೋಮದಲ್ಲಿರುವಾಗ [2]ಅತಿ ಜಾಗ್ರತೆ
೧೮ ಯಿಂದ ನನ್ನನ್ನು ಹುಡುಕಿ, ಕಂಡು ಕೊಂಡನು. ಆ ದಿನದಲ್ಲಿ ಕರ್ತನಿಂದ ಕರುಣೆ ಹೊಂದುವ ಹಾಗೆ,
ಕರ್ತನು ಅವನಿಗೆ ದಯ ಪಾಲಿಸಲಿ. ಮತ್ತು ಎಫೆಸದಲ್ಲಿ ಅವನು ಎಷ್ಟು ಸೇವೆ ಮಾಡಿದನೆಂದು, ನಿನಗೆ
ಚನ್ನಾಗಿ ತಿಳಿದದೆ.

**2.** ಆದದರಿಂದ ನೀನು, ನನ್ನ ಮಗನೇ, ಕ್ರಿಸ್ತ ಯೇಸುವಿನಲ್ಲಿರುವ ಕೃಪೆಯಲ್ಲಿ ಬಲಗೊಳ್ಳು. (೨) ಮತ್ತು
ಅನೇಕ ಸಾಕ್ಷಿಗಳ ಮುಖಾಂತರ [3]ನನ್ನಿಂದ ಕೇಳಿದವುಗಳನ್ನೇ, ಬೇರೆಯುವರನ್ನು ಸಹ ಉಪದೇಶಿಸ ತಕ್ಕವರಾದ
ನಂಬಿಕೆಯುಳ್ಳ ಜನರಿಗೆ ಒಪ್ಪಿಸು.
೩, ೪ ಆದದರಿಂದ ನೀನು ಯೇಸು ಕ್ರಿಸ್ತನ ಒಳ್ಳೇ ಯುದ್ಧಸ್ಥನಾಗಿ [4]ಶ್ರಮೆಯನ್ನು ತಾಳಿಕೋ. ಯಾವ
ದಂಡಿನವನಾದರೂ ತನ್ನನ್ನು ದಂಡಿನಲ್ಲಿ ಶೇರಿಸಿದವನನ್ನು ಮೆಚ್ಚಿಸುವ ಹಾಗೆ, ಜೀವನದ ಕೆಲಸಗಳಲ್ಲಿ [5]ಶಿಕ್ಕಿ
೫ ಕೊಳ್ಳುವದಿಲ್ಲ. ಮತ್ತು ಒಬ್ಬನು ಮಲ್ಲಯುದ್ಧ ಮಾಡಿದರೆ, [6]ನೇಮದ ಪ್ರಕಾರ ಯುದ್ಧ ಮಾಡದಿದ್ದರೆ,
೬ ಕಿರೀಟವನ್ನು ಹೊಂದನು. [7]ಕಷ್ಟ ಮಾಡುವ ಒಕ್ಕಲಿಗನು, ಮೊದಲು ಫಲಗಳಲ್ಲಿ ಪಾಲು ಹೊಂದ ಬೇಕು.
೭ ನಾನು ಹೇಳುವವುಗಳನ್ನು ಆಲೋಚಿಸು; ಕರ್ತನು ಎಲ್ಲವುಗಳಲ್ಲಿ ನಿನಗೆ ವಿವೇಕವನ್ನು ಕೊಡಲಿ.
೮ ನನ್ನ ಸುವಾರ್ತೆಯ ಪ್ರಕಾರ ದಾವೀದನ ಬೀಜದವನೂ, ಸತ್ತವರೊಳಗಿಂದ ಎಬ್ಬಿಸಲ್ಪಟ್ಟವನೂ, ಆಗಿರುವ
೯ ಯೇಸು ಕ್ರಿಸ್ತನನ್ನು [8]ಜ್ಞಾಪಕ ಮಾಡಿಕೋ. ಇದಕ್ಕೋಸ್ಕರ ನಾನು ದುಷ್ಕೃತ್ಯದವನ ಹಾಗೆ ಬಂಧಗಳ

ಮುಂತಾದವರು ರೋಮಪುರಿಗೆ ಹೋದಾಗ, ಒನೆಸಿಫೊರನ ಹೊರ್ತು ಮಿಕ್ಕಾದವರು ಪೌಲನು ಬಂಧನದವನಾಗಿ ಕಾವಲಿಯಲ್ಲಿದ್ದ ಕಾರಣ ನಾಚಿಕೆ ಪಟ್ಟು ಅವನನ್ನು ನೋಡದೆ ತೊಲಗಿ ಹೋದರೆಂದು ತೋರುತ್ತದೆ. ತಿಮೊಥೆಯನು ಅವರ ಹಾಗೆ ನಡಿಯದೆ ಧೈರ್ಯವಾಗಿರುವಂತೆ ಪೌಲನು ಇದನ್ನು ಹೇಳುತ್ತಾನೆ. (೮. ವ.)

1. ಒನೆಸಿಫೊರನು ತನ್ನ ಸಹತಾಪದಿಂದಲೂ ಸದ್ಗುಣ ಸತ್ಕ್ರಿಯೆಗಳಿಂದಲೂ ಪೌಲನನ್ನು ಉಪಶಮನ ಮಾಡಿದನು. ಆದದರಿಂದ ಅವನಿಗೂ ಅವನ ಕುಟುಂಬದವರಿಗೂ, ಕ್ರಿಸ್ತನು ಪ್ರಸನ್ನನಾಗುವ ಮಹಾ ದಿವಸದಲ್ಲಿ ಕರುಣೆ ದೊರಕುವ ಹಾಗೆ ಪೌಲನು ಪ್ರಾರ್ಥಿಸುತ್ತಾನೆ. (೧೮. ವ. ಮತ್ತಾ. ೨೫. ೩೬.)

2. ಪೌಲನು ರೋಮಪುರಿಯಲ್ಲಿ ಎರಡನೇ ಸಾರಿ ಶೆರೆಯಲ್ಲಿ ಹಾಕಲ್ಪಟ್ಟಾಗ ಅಧಿಕ ನಿರ್ಬಂಧವಾದ ಕಾವಲಿಯಲ್ಲಿ ಇದ್ದದರಿಂದ ಅವನನ್ನು ಅಧಿಕ ಜಾಗ್ರತೆಯಾಗಿ ಹುಡುಕಿ ಕಂಡು ಹಿಡಿಯ ಬೇಕಾಗಿತ್ತು.

3. ತಿಮೊಥೆಯನು ಫುಗೆಲ್ಲನು ಹೆರ್ಮೋಗೆನನು ಎಂಬವರ ವಿಶ್ವಾಸದ್ರೋಹವನ್ನೂ ಒನೆಸಿಫೊರನ ಸುಗುಣವನ್ನೂ ನೆನಸಿ, ಕ್ರಿಸ್ತನ ಕೃಪೆಯಲ್ಲಿ ಬಲಗೊಳ್ಳುವ ಹಾಗೆಯೂ, ಅನೇಕ ಸಾಕ್ಷಿಗಳ ಮುಂದೆ ಅವನು ದೇವರ ಸೇವೆಗೆ ಪ್ರತಿಷ್ಠೆ ಮಾಡಲ್ಪಟ್ಟಾಗ (೧ ತಿಮೊ. ೧. ೧೮; ೪. ೧೪; ೬. ೧೨.) ಪೌಲನಿಂದ ಕಲಿತು ಕೊಂಡ ದಿವ್ಯ ಸೇವೆಗೆ ತಕ್ಕ ವಿಷಯಗಳನ್ನು ಉತ್ತಮ ಭಕ್ತಿಯಲ್ಲಿ ಶ್ರೇಷ್ಠರಾದವರಿಗೆ ಒಪ್ಪಿಸುವ ಹಾಗೆಯೂ ಆಜ್ಞಾಪಿಸಲ್ಪಡುತ್ತಾನೆ.

4. ಶ್ರಮೆಯನ್ನು ತಾಳಿಕೋ ಎಂಬುವದಕ್ಕೆ ಮೂಲ ಭಾಷೆಯಲ್ಲಿ ನನ್ನ ಸಂಗಡ ಶ್ರಮೆಯನ್ನು ತಾಳಿಕೋ ಎಂಬದಾಗಿ ಉಂಟು. ಯುದ್ಧಸ್ಥರಿಗೂ, ಮಲ್ಲಯುದ್ಧ ಮಾಡುವವರಿಗೂ, ವ್ಯವಸಾಯ ಮಾಡುವವರಿಗೂ ಉಂಟಾಗಿರುವ ಕಷ್ಟವೂ ಪ್ರಯಾಸವೂ, ಉತ್ತಮ ಬೋಧಕರಿಗೂ ಉಂಟಾಗುತ್ತವೆ ಎಂದು ಮುಂದಿನ ವಚನದಿಂದ ಸ್ಪಷ್ಟವಾಗಿ ತೋರುತ್ತದೆ.

5. ದಂಡಿನಲ್ಲಿ ಸೇವಿಸುವವನು ಜೀವನದ ಕೆಲಸಗಳಲ್ಲಿ ಶಿಕ್ಕಿ ಕೊಂಡರೆ, ದಳಕರ್ತನ ದಯವನ್ನು ಕಳಕೊಳ್ಳುವ ಪ್ರಕಾರ, (೪. ವ.) ಮಲ್ಲಯುದ್ಧ ಮಾಡುವವನು ನೇಮದ ಪ್ರಕಾರ ಯುದ್ಧ ಮಾಡದಿದ್ದರೆ, ಬಹುಮಾನ ಹೊಂದದೆ ಹೋಗುವ ಪ್ರಕಾರ, (೫. ವ.) ಪೈರು ಮಾಡುವವನು ಸಮಯವರಿತು ಕಷ್ಟ ಪಡದಿದ್ದರೆ, ಫಲವನ್ನು ಹೊಂದದೆ ಹೋಗುವ ಪ್ರಕಾರ, (೬. ವ.) ಆತ್ಮಭಾವದ ಯುದ್ಧ ಮಾಡಲೂ, ಆತ್ಮಭಾವದ ಪೈರು ಮಾಡಲೂ ಏರ್ಪಟ್ಟಿರುವ ದೇವರ ಸೇವಕನು ಲೌಕಿಕ ಕಾರ್ಯಗಳಲ್ಲಿ ಶಿಕ್ಕಿ ಕೊಂಡು ತನ್ನ ಸೇವೆಯನ್ನು ಪೂರೈಸಲಾರದಿದ್ದರೆ, ಕಡೆಯಲ್ಲಿ ಫಲವನ್ನು ಹೊಂದಲಾರನು.

6. ನೇಮದ ಪ್ರಕಾರ ಅಂದರೆ, ಮಲ್ಲಯುದ್ಧ ಮಾಡ ತಕ್ಕ ಕ್ರಮದ ಪ್ರಕಾರವೆಂದು ಅರ್ಥವಾಗುತ್ತದೆ.

7. ಕಷ್ಟ ಪಟ್ಟು ಪೈರಿಡುವವನು ಮುಖ್ಯ ಫಲವನ್ನು ಹೊಂದುವನು. ಆದರೆ ಕಷ್ಟ ಪಡದೆ ಸೋಮಾರಿಯಾಗಿರುವವನು ಫಲ ಹೊಂದಲಾರನು. ಒಕ್ಕಲಿಗನು ಬೆಳೆಯಲ್ಲಿ ತನಗೆ ಬೇಕಾದದ್ದನ್ನು ಮೊದಲು ತೆಗೆದು ಕೊಂಡು ಮಿಕ್ಕದ್ದನ್ನು ಬೇರೊಬ್ಬರಿಗೆ ಕೊಡುವನು. ಈ ಪದ್ಧತಿಯನ್ನನುಸರಿಸಿ ಹೀಗೆ ಹೇಳಿರುತ್ತದೆ.

8. ನಿನ್ನ ಮನಸ್ಸಿಗೆ ಉತ್ಸಾಹವೂ, ನಿನ್ನ ಕೆಲಸಕ್ಕೆ ಧೈರ್ಯವೂ ಬೇಕಾದರೆ, ನಿನ್ನ ಹಾಗೆ ಮನುಷ್ಯನಾದ ನಿನ್ನ ಕರ್ತನು ಪುನರುತ್ಥಾನವಾದನೆಂಬುವದನ್ನೂ, (೮. ವ.) ಅವನ ಸುವಾರ್ತೆಯನ್ನು ಸಾರುವದಕ್ಕೆ ಏರ್ಪಟ್ಟ ನಾನು ಬಂಧಿಸಲ್ಪಟ್ಟು ಕಾವಲಿಯಲ್ಲಿದ್ದಾಗ್ಯೂ, ದೇವರ ವಾಕ್ಯವು ಬಂಧಿಸಲ್ಪಡದೆ ವೃದ್ಧಿಯಾಗುತ್ತಾ ಬರುತ್ತದೆ ಎಂಬುವದನ್ನೂ, (೯, ೧೦. ವ.) ವಿಶೇಷವಾಗಿ ಸತ್ಯಪರನಾದ ಕ್ರಿಸ್ತನು ತನ್ನ ಕೂಡ ಹಿಂಸೆ ಪಡುವವರನ್ನು ಕಡೆಯಲ್ಲಿ ಪರಮ



೧೦ ಪರ್ಯಂತರಕ್ಕೂ ಶ್ರಮೆ ಪಡುತ್ತೇನೆ. ಆದರೆ ದೇವರ ವಾಕ್ಯವು ಬಂಧಿಸಲ್ಪಟ್ಟದ್ದಲ್ಲ. ಅದಕ್ಕಾಗಿ ಆಯ
ಲ್ಪಟ್ಟವರಿಗೋಸ್ಕರ, ಅವರು ಸಹ ನಿತ್ಯ ಮಹಿಮೆಯ ಸಂಗಡ ಕ್ರಿಸ್ತ ಯೇಸುವಿನಲ್ಲಿರುವ ರಕ್ಷಣೆಯನ್ನು ಹೊಂ
೧೧ ದುವ ಹಾಗೆ, ಎಲ್ಲವುಗಳನ್ನು ತಾಳಿ ಕೊಳ್ಳುತ್ತೇನೆ. ಈ ವಾಕ್ಯವು ನಂಬಿಕೆಯಾದದ್ದು—ಏನಂದರೆ, ಅವನ
೧೨ ಕೂಡ [1]ಸತ್ತರೆ, ಕೂಡ ಬದುಕುವೆವು; ತಾಳಿ ಕೊಂಡರೆ, ಕೂಡ ಆಳುವೆವು; ನಾವು ಬೊಂಕಿದರೆ, ಅವನೂ
೧೩ ನಮ್ಮನ್ನು ಬೊಂಕುವನು; [2]ನಾವು ನಂಬದಿದ್ದರೆ, ಅವನು ನಂಬಿಕೆಯುಳ್ಳವನಾಗಿರುತ್ತಾನೆ; ತನ್ನನ್ನು ಬೊಂ
ಕಲಾರನು.

ಬೋಧಕರಿಗೆ ತಕ್ಕ ಹಂಗುಗಳು; ಅಸತ್ಯವನ್ನು ವಿಸರ್ಜಿಸಿ ಉತ್ತಮರಾಗಿ ನಡಿಯ ಬೇಕೆಂಬ ಕಟ್ಟಳೆಗಳು.

೧೪ ಯಾವ ಪ್ರಯೋಜನಕ್ಕಲ್ಲ, ಕೇಳುವವರ ನಾಶನಕ್ಕಾಗಿ ವಾಗ್ವಾದ ಮಾಡ ಬಾರದೆಂದು, ಕರ್ತನ ಮುಂದೆ
೧೫ ಸಾಕ್ಷಿ ಹೇಳಿ, ಇವುಗಳ [3]ಜ್ಞಾಪಕ ಕೊಡು. ದೇವರಿಗೆ ಪರೀಕ್ಷಿತನಾಗಿಯೂ, ನಾಚಿಕೆ ಪಡದ ಕೆಲಸದವ
ನಾಗಿಯೂ, ಸತ್ಯದ ವಾಕ್ಯವನ್ನು ಸರಿಯಾಗಿ [4]ಭಾಗಿಸುವವನಾಗಿಯೂ, ನಿನ್ನನ್ನು ಪ್ರತಿಷ್ಠೆ ಮಾಡಿ ಕೊಳ್ಳ
೧೬ ಎಚ್ಚರಿಕೆಯಾಗಿರು. ಆದರೆ ಅಪಭ್ರಷ್ಟವಾದ ವ್ಯರ್ಥ ಶಬ್ದಗಳಿಗೆ ದೂರವಾಗಿರು; ಯಾಕಂದರೆ ಅವು
೧೭ ಹೆಚ್ಚಾದ ಭಕ್ತಿಹೀನತ್ವಕ್ಕೆ ಬೆಳೆಯುತ್ತವೆ. ಮತ್ತು ಅವರ ಮಾತು [5]ಕೊಳಕ ಹುಣ್ಣಿನ ಹಾಗೆ ತಿನ್ನುವದು—
೧೮ ಅಂಥವರಲ್ಲಿ ಹುಮೆನಾಯನೂ ಫಿಲೇತನೂ ಇದ್ದಾರೆ. ಇವರು ಸತ್ಯಕ್ಕೆ ತಪ್ಪಿ, [6]ಪುನರುತ್ಥಾನವು ಆಗಿ
ಹೋಯಿತೆಂದು ಹೇಳಿ, ಕೆಲವರ ವಿಶ್ವಾಸವನ್ನು ಕೆಡವುತ್ತಾರೆ.
೧೯ ಹ್ಯಾಗಾದರೂ ದೇವರ [7]ಸ್ಥಿರವಾದ ಅಸ್ತಿವಾರವು ನಿಲ್ಲುತ್ತದೆ; ಅದಕ್ಕೆ ಮುದ್ರೆಯು ಇದೇ—ಕರ್ತನು

ಪದವಿಗೆ ಶೇರಿಸುವನೆಂಬುವದನ್ನೂ (೧೧—೧೩. ವ.) ಜ್ಞಾಪಕ ಮಾಡಿಕೋ ಎಂಬದಾಗಿ ಪೌಲನು ಹೇಳುತ್ತಾನೆ.

1. ಪ್ರತಿ ದಿನವೂ ಸಾಯ ತಕ್ಕದ್ದಾಗಿ (೧ ಕೊರಿ. ೧೫. ೩೧.) ಕ್ರಿಸ್ತನಿಗೆ ನಮ್ಮನ್ನು ಸಮರ್ಪಿಸ ಬೇಕೆಂಬುವದೇ ಈ ವಚನದ ತಾತ್ಪರ್ಯವು. ಹೀಗೆ ಅವನ ಕೂಡ ಸಾಯುವೆವಾದರೆ, ಅವನ ಕೂಡ ಬದುಕುವೆವು. (ರೋಮಾ. ೬. ೩—೮.) ಅವನ ಕೂಡ ಶ್ರಮೆ ಪಟ್ಟರೆ, ಅವನ ಕೂಡ ಆಳುವೆವು. (ರೋಮಾ. ೮. ೧೭, ೧೮.) ಹೀಗೆ ಮಾಡದೆ ನಾವು ಅವನನ್ನು ಬೊಂಕಿದರೆ, ಅವನೂ ನಮ್ಮನ್ನು ಬೊಂಕುವನು. (ಮತ್ತಾ. ೧೦. ೩೩.)

2. ನಾವು ನಂಬಿಕೆ ಇಲ್ಲದವರಾದರೆ, ಸತ್ಯಪರನಾದ ದೇವರ ನಂಬಿಕೆಯು ಬಿದ್ದು ಹೋಗದು. ಆತನು ಮಾರ್ಪಡದ ಸತ್ಯವುಳ್ಳವನಾಗಿರುವದರಿಂದ ಆತನ ವಾಕ್ಯವು ಎಂದಿಗೂ ಮಾರ್ಪಡದು. ಹಾಗೆ ಮಾರ್ಪಡುವದಾದರೆ, ಆತನು ತನ್ನನ್ನು ತಾನೇ ಬೊಂಕಿದ ಹಾಗಿರುವದು. ಇದು ಅಸಾಧ್ಯವಾದ ಕಾರ್ಯವು.

3. ಅವರು ಕೇಳಿ ತಿಳುಕೊಂಡ ಈ ಸತ್ಯಗಳ ಪ್ರಕಾರ ನಡೆದು ಕೊಂಡರೆ, ನಿಷ್ಪ್ರಯೋಜನವಾದದ್ದೂ, ಕೇಳುವವರನ್ನು ಮರುಳುಗೊಳಿಸ ತಕ್ಕದ್ದೂ ಆದ ವಿಷಯಗಳನ್ನು ಕುರಿತು ವ್ಯರ್ಥ ತರ್ಕ ಮಾಡ ಸ್ಥಳವಿರಲಾರದು. ಆದದರಿಂದ ಸಭೆಯವರು ಕೇಳಿ ತಿಳಿದು ಕೊಂಡಿರುವ ಸತ್ಯಗಳನ್ನೇ ಅವರಿಗೆ ಆಗಾಗ್ಯೆ ಜ್ಞಾಪಕ ಪಡಿಸಿ ಎಚ್ಚರಿಸಿ ಬುದ್ಧಿ ಹೇಳುವದು ಉತ್ತಮ ಬೋಧಕರ ಕೆಲಸವಾಗಿದೆ.

4. ಒಬ್ಬ ಉಗ್ರಾಣಿಕನು ಭೋಜನವನ್ನು ಹಂಚುವ ಪ್ರಕಾರ (ಲೂಕ. ೧೨. ೪೨.) ಉತ್ತಮ ಬೋಧಕರು ದಿವ್ಯ ಸತ್ಯವನ್ನು ಕಲಬೆರಿಕೆ ಇಲ್ಲದೆ ಶುದ್ಧವಾಗಿಯೂ ವಿವೇಕವಾಗಿಯೂ ಅವರವರ ಸ್ಥಿತಿಗೂ ಸಮಯಕ್ಕೂ ತಕ್ಕ ಹಾಗೆ ಅವರವರಿಗೆ ಹಂಚಿ ಹೇಳ ಬೇಕು. (ರೋಮಾ. ೧೨. ೬—೮.) ಉತ್ತಮ ಬೋಧಕರ ಸೇವೆಯು ಸ್ಥಿರವಾಗಿರುವದರಿಂದ ಅವರು ನಾಚಿಕೆ ಪಡದೆ ದೇವರ ಮೆಚ್ಚಿಕೆಯನ್ನು ಹೊಂದುವರು. ಇದಕ್ಕಾಗಿ ಅವರು ಹೆಚ್ಚು ಜಾಗ್ರತೆ ಪಡ ಬೇಕು.

5. ಉತ್ತಮ ಬೋಧಕರ ಉಪದೇಶವು ಆತ್ಮಕ್ಕೆ ಆರೋಗ್ಯವಾದ ಔಷಧದೋಪಾದಿಯಾಗಿಯೂ, ಕಳ್ಳಬೋಧಕರ ಉಪದೇಶವು ಕೊಳಕ ಹುಣ್ಣಿನೋಪಾದಿಯಾಗಿಯೂ ಇರುತ್ತದೆ. ಕೊಳಕ ಹುಣ್ಣಿನಲ್ಲಿ ದುರ್ಮಾಂಸವು ಬೆಳೆದು ಶರೀರವೆಲ್ಲಾ ವ್ಯಾಪಿಸಿ ಕೊಳೆಯುವ ಪ್ರಕಾರ ಸುಳ್ಳು ಬೋಧನೆಯು ಭಕ್ತಿಹೀನತ್ವವನ್ನು ಹೆಚ್ಚಿಸಿ ಆತ್ಮವನ್ನು ನಾಶ ಮಾಡುವದು.

6. ಆತ್ಮವನ್ನು ಕೆಡಿಸುವ ಕಳ್ಳಬೋಧನೆಗೆ ದೃಷ್ಟಾಂತವಾಗಿ ಹುಮೆನಾಯನು ಫಿಲೇತನು ಎಂಬವರ ಬೋಧನೆಯನ್ನು ತೋರಿಸಿ ಇದೆ. (೧ ತಿಮೊ. ೧. ೨೦.) ಈ ಕಳ್ಳಬೋಧಕರು, ಪಂಚಭೂತಗಳು ಪಂಚಭೂತಗಳಲ್ಲಿ ಶೇರಿ ಹೋಗುತ್ತವೆಂದು ಹಿಂದು ಜನರು ಹೇಳುವ ಪ್ರಕಾರ, ಮಣ್ಣಿಗೆ ಮಣ್ಣಾದ ಶರೀರವು ತಿರಿಗಿ ಏಳುವದಿಲ್ಲವೆಂದೂ, ಆತ್ಮವು ಮಾತ್ರ ಬದುಕುವದೆಂದೂ, ಕ್ರಿಸ್ತನನ್ನು ಹೊಂದಿದ ಪಾಪಾತ್ಮರು ಮನಸ್ಸು ಮಾರ್ಪಟ್ಟು ಗುಣ ಪಡುವದೇ ಶರೀರದ ಪುನರುತ್ಥಾನವೆಂದೂ, (ರೋಮಾ. ೬. ೩—೬.) ಬೋಧಿಸಿದ ಹಾಗೆ ತೋರುತ್ತದೆ. ಆದದರಿಂದ ಅವರ ಬೋಧನೆ ಕ್ರಿಸ್ತಮಾರ್ಗದ ಮುಖ್ಯ ಬೋಧನೆಗೆ ವಿರೋಧವಾಗಿಯೂ (೧ ಕೊರಿ. ೧೫. ಸಂಧಿ.) ಆತ್ಮವನ್ನು ನಾಶ ಮಾಡುವದಾಗಿಯೂ ಇತ್ತು. ವೇದದಲ್ಲಿರುವ ಸ್ಪಷ್ಟವಾದ ಬೋಧನೆಗಳಿಗೆ ಜ್ಞಾನಾರ್ಥವನ್ನು ಕಲ್ಪಿಸುವದು ಮೋಸವೇ.

7. ಕಳ್ಳಬೋಧನೆಯಿಂದ ಮೋಸ ಹೋದ ಕೆಲವರ ವಿಶ್ವಾಸವು ಬಿದ್ದು ಹೋದಾಗ್ಯೂ, (೧೮. ವ.) ಸ್ಥಿರವಾದ ಅಸ್ತಿವಾರದ ಮೇಲೆ ಸ್ಥಾಪಿಸಲ್ಪಟ್ಟ ದೇವರ ಸತ್ಯವು ಅಥವಾ ದೇವರ ಸಭೆಯು ಎಂದಿಗೂ ಬಿದ್ದು ಹೋಗದೆ ನೆಲೆಯಾಗಿರುವದು. ಒಂದು ರೂಪಾಯಿಯ ಎರಡು ಪಕ್ಕೆಗಳಲ್ಲಿಯೂ ಮುದ್ರೆ ಇರುವ ಪ್ರಕಾರ,

ತನ್ನವರನ್ನು ಅರಿತಿದ್ದಾನೆ; (ಅಂಕೆ. ೧೬. ೫.) ಮತ್ತು ಕ್ರಿಸ್ತನ ಹೆಸರನ್ನು ಹೇಳುವವರೆಲ್ಲರು ಅನ್ಯಾಯವನ್ನು
೨೦ ಬಿಟ್ಟು ಬಿಡಲಿ. ಆದರೆ [1]ದೊಡ್ಡ ಮನೆಯಲ್ಲಿ ಬೆಳ್ಳಿ ಭಂಗಾರದ ಪಾತ್ರೆಗಳು ಮಾತ್ರವಲ್ಲ, ಮರದವುಗಳೂ,
೨೧ ಮಣ್ಣಿನವುಗಳೂ, ಕೆಲವು ಮಾನಕ್ಕೂ, ಕೆಲವು ಅವಮಾನಕ್ಕೂ, ಇರುವವು. ಹಾಗಾದರೆ ಒಬ್ಬನು [2]ಇವು
ಗಳನ್ನು ಬಿಟ್ಟು, ತನ್ನನ್ನು ಶುದ್ಧ ಮಾಡಿ ಕೊಂಡರೆ, ಪರಿಶುದ್ಧ ಮಾಡಲ್ಪಟ್ಟಂಥ, ಯಜಮಾನನಿಗೆ ಪ್ರಯೋ
ಜನವಾದಂಥ, ಎಲ್ಲಾ ಒಳ್ಳೇ ಕೆಲಸಕ್ಕೆ ಸಿದ್ಧವಾದಂಥ, ಮಾನಕ್ಕಾದಂಥ, ಪಾತ್ರೆಯಾಗಿರುವನು.
೨೨ ಆದರೆ [3]ಯೌವನದ ಆಶೆಗಳನ್ನು ಬಿಟ್ಟು ಓಡಿ ಹೋಗಿ, ಶುದ್ಧ ಹೃದಯದಿಂದ ಕರ್ತನನ್ನು ಸ್ಮರಿಸುವವರ
೨೩ ಸಂಗಡ ನೀತಿ, ವಿಶ್ವಾಸ, ಪ್ರೀತಿ, [4]ಸಮಾಧಾನಗಳನ್ನು ಹಿಂದಟ್ಟು. ಇದಲ್ಲದೆ ವಿದ್ಯವಿಲ್ಲದ [5]ಹುಚ್ಚು ತರ್ಕ
೨೪ ಗಳನ್ನು ಅವುಗಳಿಂದ ಝಗಳಗಳು ಹುಟ್ಟುತ್ತವೆಂದು ತಿಳಿದು, ಬೇಡೆಂದು ಬಿಡು. ಕರ್ತನ ದಾಸನು ಝಗಳ
೨೫ ವಾಡದೆ, ಎಲ್ಲರ ಕಡೆಗೆ ಶಾಂತನೂ, ಬೋಧಿಸ ಶಕ್ತನೂ, ತಾಳ್ಮೆಯುಳ್ಳವನೂ ಆಗಿದ್ದು, ಒಂದು ವೇಳೆ
೨೬ [6]ದೇವರು ಅವರಿಗೆ ಸತ್ಯದ ಅರಿಕೆಗೆ ಮಾನಸಾಂತರ ಕೊಟ್ಟಾನೆಂದೂ, ತನ್ನ ಚಿತ್ತದ ಪ್ರಕಾರ ಅವರನ್ನು
ಶೆರೆ ಹಿಡಿಯುವ ಪಿಶಾಚನ ಉರುಲಿನಿಂದ ತಪ್ಪಿ [7]ಎಚ್ಚರವಾದಾರೆಂದೂ, ಸಾತ್ವಿಕತ್ವದಲ್ಲಿ ವಿರೋಧಿಗಳನ್ನು
ಉಪದೇಶಿಸುವವನಾಗಿರ ಬೇಕು.

ಕಡೇ ಕಾಲಗಳಲ್ಲಿ ಉಂಟಾಗುವ ಕೆಟ್ಟ ಮೋಸವನ್ನು ಕುರಿತು ಎಚ್ಚರಿಸಿದ್ದು; ದೇವರ ವಾಕ್ಯವನ್ನು ಓದಿ
ಜಾಗ್ರತೆಯಾಗಿ ನಡಿಯ ಆಜ್ಞಾಪಿಸಿದ್ದು.

**3.** [8]ಇದಲ್ಲದೆ ಇದನ್ನು ತಿಳುಕೋ—ಕಡೇ ದಿನಗಳಲ್ಲಿ [9]ಕಠಿಣವಾದ ಕಾಲಗಳು ಬರುವವು. (೨) ಹ್ಯಾಗಂ

ದಿವ್ಯ ಸತ್ಯವಾದ ಈ ಬೋಧನೆಯಲ್ಲಿ ಎರಡು ಪಕ್ಕೆಗಳಲ್ಲಿಯೂ ಮುದ್ರೆಯುಂಟು. ಒಂದು, ದೇವರಿಗೆ ಮಾತ್ರ ತಿಳಿಯ ತಕ್ಕದ್ದು; ಮತ್ತೊಂದು, ದೇವರಿಗೂ ಮನುಷ್ಯರಿಗೂ ತಿಳಿಯ ತಕ್ಕದ್ದು. ಕರ್ತನು ತನ್ನವರನ್ನು ಅರಿತಿದ್ದಾನೆ, ಎಂಬ ಸಂಗತಿ ಅಡಗಿರುವ ಮುದ್ರೆಯು ಆತನ ದಾಸರಿಗೆ ಬಹಳ ಆದರಣೆ ಕೊಡ ತಕ್ಕದ್ದಾಗಿದೆ. (ಕೀರ್ತ. ೧. ೬.) ಕ್ರಿಸ್ತನ ಹೆಸರನ್ನು ಹೇಳುವವರೆಲ್ಲರೂ ಅನ್ಯಾಯವನ್ನು ಬಿಟ್ಟು ಬಿಡಲಿ, ಎಂಬ ಸಂಗತಿ ಅಡಗಿರುವ ಮುದ್ರೆಯು ಭಕ್ತಿಹೀನರಿಗೆ ಭಯವನ್ನೂ ಎಚ್ಚರಿಕೆಯನ್ನೂ ಉಂಟು ಮಾಡ ತಕ್ಕದ್ದಾಗಿದೆ. ಈ ಎರಡು ಮುದ್ರೆಗಳಲ್ಲಿರುವ ವಿಷಯ ಗಳು, ಅಂಕೆ. ೧೬. ೫, ೨೬. ವಚನಗಳಿಗೆ ಅನುಗುಣವಾಗಿವೆ.

1. ಒಂದು ದೊಡ್ಡ ಮನೆಯಲ್ಲಿ ಭಂಗಾರದಿಂದಲೂ ಬೆಳ್ಳಿಯಿಂದಲೂ ಮಾಡಲ್ಪಟ್ಟ ಬೆಲೆಯುಳ್ಳ ಸ್ಥಿರವಾದ ಪಾತ್ರೆಗಳೂ, ಮರದಿಂದಲೂ ಮಣ್ಣಿನಿಂದಲೂ ಮಾಡಲ್ಪಟ್ಟ ಸ್ವಲ್ಪ ಬೆಲೆಯುಳ್ಳಂಥ ಒಡೆದು ಹೋಗ ತಕ್ಕಂಥ ಪಾತ್ರೆಗಳೂ ಇರುವ ಪ್ರಕಾರ, ಸಭೆಯಲ್ಲಿಯೂ ಭಂಗಾರದ ಪಾತ್ರೆಗೆ ಸಮಾನವಾದ ಉತ್ತಮ ಭಕ್ತರೂ, ಮಣ್ಣಿನ ಪಾತ್ರೆಗೆ ಸಮಾನವಾದ ಅಪ್ರಯೋಜಕರೂ ಇರುತ್ತಾರೆ.

2. ಇವುಗಳನ್ನು ಎಂಬುವದು ಘನಹೀನ ಪಾತ್ರೆಗಳಿಗೆ ಸಮಾನವಾಗಿರುವ ಅಪ್ರಯೋಜಕರನ್ನೂ ವಂಚಕರನ್ನೂ ಕುರಿತದ್ದು. (೨೦. ವ.) ದೇವಭಕ್ತರು ದುರ್ಮಾರ್ಗರನ್ನು ಬಿಟ್ಟು ಪೂರ್ಣವಾಗಿ ಪ್ರತ್ಯೇಕವಾಗುವದು ಅಸಾಧ್ಯವಾಗಿದ್ದರೂ, ಅವರ ಪಾಪಗಳಿಗೆ ಸ್ವಲ್ಪವಾದರೂ ಸಮ್ಮತಿಸದೆ ತಮ್ಮನ್ನು ಶುದ್ಧವಾಗಿ ಕಾದು ಕೊಳ್ಳುವರು. ಆಗಲವರು ತಮ್ಮ ಕರ್ತನ ಸೇವೆಗೆ ತಕ್ಕ ಭಂಗಾರದ ಪಾತ್ರೆಗಳ ಹಾಗೆ ಮೆಚ್ಚಿಕೆ ಹೊಂದಿ ನಡಿಯುವರು. ಕಡೆಯಲ್ಲಿ ಸುವರ್ಣಲೋಕದಲ್ಲಿ ಶೇರಿ ಬಾಳುವರು.

3. ಆ ಕಾಲದಲ್ಲಿ ತಿಮೊಥೆಯನು ಮಧ್ಯಪ್ರಾಯದವನಾಗಿದ್ದನು. (೧ ತಿಮೊ. ೪. ೧೨.) ಇಂಥಾ ಪ್ರಾಯದಲ್ಲಿ ಪಾಪದಿಚ್ಛೆಗಳು ಪ್ರಬಲವಾಗಿರುವವು. ಇಂಥಾ ಇಚ್ಛೆಗಳಿಗೆ ತೊಲಗಿ ದೂರ ಓಡಿ ಹೋಗ ಬೇಕು. (೧ ಕೊರಿ. ೬. ೧೮.) ಇಲ್ಲದಿದ್ದರೆ ಇಚ್ಛೆ ಎಂಬ ವಿಷಸರ್ಪವು ಕಚ್ಚಿ ಆತ್ಮವನ್ನು ಕೊಲ್ಲುವದು.

4. ಪಾಪದಿಚ್ಛೆಗಳಿಗೆ ತೊಲಗಿ ಓಡುವವರು ನೀತಿ, ವಿಶ್ವಾಸ, ಪ್ರೀತಿ, ಸಮಾಧಾನಗಳನ್ನು ಹಿಂದಟ್ಟಿ, ಶುದ್ಧ ಹೃದಯದಿಂದ ಕರ್ತನನ್ನು ಸೇವಿಸುವ ಉತ್ತಮರ ಅನ್ಯೋನ್ಯದಲ್ಲಿ ನಡಿಯ ತಕ್ಕದ್ದು.

5. ಹುಚ್ಚು ಎಂಬುವದು ಅಜ್ಞಾನವೇ. ಬುದ್ಧಿಹೀನವೂ ಅಯೋಗ್ಯವೂ ಆದ ತರ್ಕಗಳಿಗೆ ಅಜ್ಞಾನವೇ ಕಾರಣವು. ಇವುಗಳಿಂದ ಝಗಳ ಉಂಟಾಗುವದು ಸಹಜವೇ.

6. ದೇವರ ಉತ್ತಮ ಸೇವಕರು ಒಬ್ಬರ ಸಂಗಡಲೂ ಝಗಳ ಮಾಡದೆ ಶಾಂತ ಗುಣದಿಂದ ಶತ್ರುಗಳಿಗೆ ಸತ್ಯವನ್ನು ಬೋಧಿಸ ಬೇಕು. ಹಾಗೆ ಮಾಡಿದರೆ, ಕರುಣೆಯುಳ್ಳ ದೇವರು ದುರ್ಮಾರ್ಗರ ದುಸ್ವಭಾವವನ್ನು ಪರಿಹರಿಸಿ ಸುಗುಣವನ್ನು ಕೊಡುವನು.

7. ಪಿಶಾಚನ ಉರುಲಿನಲ್ಲಿ ಶಿಕ್ಕಿದವರು ಎಚ್ಚರಿಕೆ ಹೊಂದಿ ಅದರಿಂದ ತಪ್ಪಿಸಿ ಕೊಂಡು ದೇವರ ಚಿತ್ತದ ಪ್ರಕಾರ ನಡೆದಾರು ಎಂದು ಅರ್ಥ ಮಾಡ ಬಹುದು. ಎಲ್ಲರೂ ರಕ್ಷಣೆಗೆ ಬರ ಬೇಕೆಂದು ಚಿತ್ತವುಳ್ಳ ದೇವರು ಒಂದು ವೇಳೆ ಅವರಿಗೆ ಕೃಪೆ ತೋರಿಸುವನು.

8. ಕಡೇ ಕಾಲವು ಕಠಿಣವಾದ ಕಾಲವಾಗಿರುವದೆಂದೂ, ಅದರಲ್ಲಿ ಸಕಲ ವಿಧ ದುರ್ಮಾರ್ಗತನವು ನಡಿಯುವದೆಂದೂ, ಪೌಲನು ಹೇಳಿ, (೩. ೧—೯.) ಸುವಾರ್ತೆಯ ಸೇವೆಯಲ್ಲಿಯೂ, ಅದರಿಂದ ಬಂದ ಉಪದ್ರದಲ್ಲಿಯೂ, ಸಮ್ಮಂಥ ಪಟ್ಟಿದ್ದ ಉತ್ತಮ ದಾಸನಾದ ತಿಮೊಥೆಯನನ್ನು ಕುರಿತು ಪೌಲನ ಮನಸ್ಸಿನಲ್ಲಿದ್ದ ಅಭಿಪ್ರಾಯವನ್ನು ತಿಳಿಸಿ, (೧೦—೧೭. ವ.) ತನ್ನ ಸೇವೆಯು ಮುಗಿಯುವ ಕಾಲವು ಸಮಿಾಪವಾಗಿದ್ದದರಿಂದ, ಸತ್ಯಪರಿಪಾಲನೆಯ ವಿಷಯದಲ್ಲಿ ಧೈರ್ಯವಾಗಿ ಸಾಧಿಸುತ್ತಾ ಬರ ಬೇಕೆಂದು ಅವನಿಗೆ ಆಜ್ಞಾಪಿಸಿ, (೪. ೧—೮.) ತನ್ನ ಸ್ಥಿತಿಯನ್ನು ಹೇಳಿ ಅವನನ್ನು ತನ್ನ ಬಳಿಗೆ ಬರ ಹೇಳಿ, (೯—೧೮. ವ.) ವಂದನೆಗಳಿಂದ ಪತ್ರಿಕೆಯನ್ನು ಮುಗಿಸುತ್ತಾನೆ. (೧೯—೨೨. ವ.)

9. ಕಡೇ ದಿನಗಳು ಎಂಬುವದು, ಕ್ರಿಸ್ತನ ಪ್ರಸನ್ನತೆಗೆ ಮುಂಚಿನ ದಿವಸಗಳನ್ನು ಅಥವಾ ಅಂತ್ಯಕಾಲವನ್ನು ಕುರಿತದ್ದಾಗಿದೆ. (೧ ತಿಮೊ. ೪. ೧—೩. ೨ ಥೆಸ್ಸ. ೨. ೧—೧೨.) ಕಠಿಣ ಕಾಲವೆಂದರೆ ಉತ್ತಮ ಭಕ್ತರಿಗೆ ಸಂಕಟವುಳ್ಳ ಕಾಲವು.



ದರೆ [1]ಮನುಷ್ಯರು [2]ಸ್ವಸ್ನೇಹದವರೂ, ದ್ರವ್ಯಾಶಿಕರೂ, ಡಾಂಭಿಕರೂ, ಗರ್ವಿಷ್ಠರೂ, ದೂಷಕರೂ, ಹೆತ್ತವ
೩ ರಿಗೆ ಅವಿಧೇಯರೂ, ಕೃತಜ್ಞತೆಯಿಲ್ಲದವರೂ, ಅಪವಿತ್ರರೂ, ವಾತ್ಸಲ್ಯವಿಲ್ಲದವರೂ, ಅನ್ಯೋನ್ಯವಾಗದ
೪ ವರೂ, ಚಾಡಿಗಾರರೂ, ಅಸಮ್ಯತರೂ, ಅಸಾಧುಗಳೂ, ಸಜ್ಜನ ಸ್ನೇಹವಿಲ್ಲದವರೂ, ದ್ರೋಹಿಗಳೂ,
೫ ಆತುರರೂ, ಉಬ್ಬಿ ಕೊಂಡವರೂ, ದೇವರಿಗಿಂತ ಹೆಚ್ಚಾಗಿ ಸುಖಗಳನ್ನು ಸ್ನೇಹಿಸುವವರೂ, [3]ಭಕ್ತಿಯ
೬ ರೂಪವುಳ್ಳವರಾಗಿ ಅದರ ಬಲವನ್ನು ಬೊಂಕಿದವರೂ, ಆಗಿರುವರು; ಇಂಥವರಿಗೆ ದೂರವಾಗು. ಯಾಕಂ
೭ ದರೆ ಮನೆಗಳಲ್ಲಿ ಹೊಕ್ಕು, [4]ಪಾಪಗಳಿಂದ ಭರಿತರಾಗಿ, ನಾನಾ ಆಶೆಗಳಿಂದ ವೈಯಲ್ಪಟ್ಟು, [5]ಯಾವಾಗ
ಲೂ ಕಲಿಯುತ್ತಾ, ಎಂದೂ ಸತ್ಯದ ತಿಳುವಿಕೆಗೆ ಶೇರಲಾರದ ಹೆಂಗಸರನ್ನು [6]ಶೆರೆ ಹಿಡಿಯುವವರು ಅಂಥವ
೮ ರಾಗಿದ್ದಾರೆ. ಯನ್ನನೂ [7]ಯಂಬ್ರನೂ ಮೋಶೆಯನ್ನು ವಿರೋಧಿಸಿದ ಮೇರೆಗೆ, ಇವರು ಸಹ ಬುದ್ಧಿ ಕೆಟ್ಟ
೯ ವರಾಗಿಯೂ, ವಿಶ್ವಾಸದ ವಿಷಯ ಆಗದವರಾಗಿಯೂ, ಸತ್ಯವನ್ನು ವಿರೋಧಿಸುತ್ತಾರೆ. ಆದರೆ ಅವರು
ಅಧಿಕವಾಗಿ [8]ಹೆಚ್ಚರು; ಯಾಕಂದರೆ ಅವರದು ಆದ ಪ್ರಕಾರವೇ, ಇವರ ದುರ್ಬುದ್ಧಿಯು ಎಲ್ಲರಿಗೆ ಪ್ರಸಿ
ದ್ಧಿಯಾಗುವದು.
೧೦ ಆದರೆ ನೀನು ನನ್ನ ಬೋಧನೆ, ನಡತೆ, ಅಭಿಪ್ರಾಯ, ವಿಶ್ವಾಸ, ದೀರ್ಘಶಾಂತಿ, ಪ್ರೀತಿ, ತಾಳ್ಮೆಗಳನ್ನೂ,
೧೧ [9]ಅಂತಿಯೋಕ್ಯದಲ್ಲಿಯೂ ಇಕೊನ್ಯದಲ್ಲಿಯೂ ಲುಸ್ತ್ರದಲ್ಲಿಯೂ ನಾನು ಪಟ್ಟ ಹಿಂಸೆ ಶ್ರಮೆಗಳನ್ನೂ [10]ಹಿಂ
೧೨ ಬಾಲಿಸಿದಿ. ಎಂಥ ಹಿಂಸೆಗಳನ್ನು ತಾಳಿದೆನು! ಅವೆಲ್ಲವುಗಳಿಂದ ಕರ್ತನು ನನ್ನನ್ನು ತಪ್ಪಿಸಿದನು. ಇದಲ್ಲದೆ
೧೩ ಕ್ರಿಸ್ತ ಯೇಸುವಿನಲ್ಲಿ ಭಕ್ತಿಯಾಗಿ ಬದುಕ [11]ಮನಸ್ಸುಳ್ಳವರೆಲ್ಲರು ಹಿಂಸೆ ಪಡುವರು. ಆದರೆ ದುಷ್ಟ

1. ಮನುಷ್ಯರೆಂಬುವದು ದೇವಭಕ್ತಿಯ ವೇಷವನ್ನು ಧರಿಸಿ ಕೊಂಡಿರುವ ಕಪಟಸ್ಥರನ್ನು ಕುರಿತದ್ದು. (೫. ವ.) ಈ ಸಂಧಿಯಲ್ಲಿ ಇವರನ್ನು ಕುರಿತು ಹೇಳಿರುವದಕ್ಕೂ, ರೋಮಾ. ೧. ೨೯—೩೧. ವಚನಗಳಲ್ಲಿ ಅಜ್ಞಾನಿಗಳನ್ನು ಕುರಿತು ಹೇಳಿರುವದಕ್ಕೂ ಬಹಳ ಸಮ್ಮಂಥವುಂಟು.

2. ಇವರು ಮಾಡುವ ಎಲ್ಲಾ ಅಕ್ರಮಗಳಿಗೂ, ಸ್ವಸ್ನೇಹವೇ ಮೂಲ ಕಾರಣವು. ನಾನು ಎಂಬ ಅಹಂಕಾರಭೂತವು ಒಳಗೆ ವಾಸ ಮಾಡುವಾಗ ಎಲ್ಲಾ ಅಕ್ರಮಕ್ಕೂ ಮಾರ್ಗವುಂಟು. ದೇವರ ಪ್ರೀತಿ ಇಲ್ಲದವರಾಗಿ ಸುಖಭೋಗಪ್ರಿಯರಾಗಿರುವರೆಂದು ಕಡೆಯಾಗಿ ಹೇಳಿದ ಅಕ್ರಮವು ಸ್ವಸ್ನೇಹದವರಾದ ಅವರಲ್ಲಿರುವದು ಪ್ರತ್ಯಕ್ಷವಾಗಿದೆ.

3. ಭಕ್ತಿಯ ಬಲವನ್ನು ಅರಿಯದವರಾದ ಅವರು ಭಕ್ತಿಯ ವೇಷವನ್ನು ಧರಿಸಿ ಕೊಂಡದ್ದು ಮಹಾ ಪಾಪವಾಗಿದೆ. ಚಿನ್ನಕ್ಕೆ ಮೇಲೆ ಹಚ್ಚಿದ ಬಣ್ಣವು ಪುಠಕ್ಕೆ ನಿಲ್ಲಲಾರದು. ಹಾಗೆಯೇ ಅವರ ಬಹಿರ್ವೇಷವು ಕ್ರಿಸ್ತನು ಪ್ರಸನ್ನನಾಗುವ ಆ ಮಹಾ ದಿವಸದಲ್ಲಿ ನಿಲ್ಲಲಾರದು. ಆತನು ಅವರನ್ನು ನೋಡಿ, ಅಕ್ರಮಕಾರರೇ, ನನ್ನನ್ನು ಬಿಟ್ಟು ತೊಲಗಿ ಹೋಗಿರಿ ಅನ್ನುವನು. ಈ ಪತ್ರಿಕೆ ಬರಿಯಲ್ಪಟ್ಟ ಕಾಲದಲ್ಲಿಯೇ ಇಂಥಾ ಅಕ್ರಮಕಾರರು ಇದ್ದದರಿಂದ ಇಂಥವರಿಗೆ ದೂರವಾಗು ಎಂದು ಪೌಲನು ಆಜ್ಞಾಪಿಸಿದನು.

4. ಪಾಪದಿಚ್ಛೆಯುಳ್ಳ ಹೆಂಗಸರ ಪಾಪದ ಭಾರವನ್ನು ನಾವು ಇಳಿಸಿ ಬಿಟ್ಟು ಲಘು ಮಾಡುತ್ತೇವೆಂದು ಕಳ್ಳಬೋಧಕರು ಹೇಳಿ, ಅವರನ್ನು ವಶ ಮಾಡಿ ಕೊಂಡರು. ಪಾಪಸಂಕೀರ್ತನೆ ಪಾಪಕ್ಷಮೆ ಎಂಬ ತಂತ್ರವಾದ ಸರಪಣಿಗಳಿಂದ ಅನೇಕ ಮುಗ್ಧ ಸ್ತ್ರೀಯರ ಮನಸ್ಸನ್ನು ಎಳಕೊಳ್ಳುವ ಕಳ್ಳಬೋಧಕರ ವಂಚನೆ ಆ ಕಾಲದಲ್ಲಿಯೇ ಪ್ರಾರಂಭವಾಯಿತೇನೋ?

5. ಉಲ್ಲಾಸಗಳಲ್ಲಿಯೂ ದುರಿಚ್ಛೆಗಳಲ್ಲಿಯೂ ಮುಣುಗಿರುವ ಮುಗ್ಧರಾದ ಹೆಂಗಸರು ದೇವರ ಸತ್ಯವನ್ನು ಅಪೇಕ್ಷಿಸದೆ, ನೂತನ ವಿಷಯಗಳನ್ನು ತಿಳಿಯ ಬೇಕೆಂಬ ವ್ಯರ್ಥಾಪೇಕ್ಷೆಯಿಂದ ರಕ್ಷಣೆಯ ವಿಷಯಗಳನ್ನು ತಿಳಿಯದೆ ಹೋದರು. ಅಯ್ಯೋ! ಸ್ತ್ರೀಯರಲ್ಲಿಯೂ ಪುರುಷರಲ್ಲಿಯೂ ಇಂಥವರು ಎಷ್ಟೋ ಮಂದಿ ಮೋಸ ಹೋಗುತ್ತಾರೆ.

6. ಅಂಥವರು ಎಂಬುವದು, ದೇವಭಕ್ತಿಯ ವೇಷವುಳ್ಳವರನ್ನು ಕುರಿತದ್ದು. (೫. ವ.)

7. ಯನ್ನನೂ ಯಂಬ್ರನೂ ಐಗುಪ್ತ ದೇಶದ ಮಂತ್ರವಾದಿಗಳಲ್ಲಿ ಶ್ರೇಷ್ಠರಾಗಿದ್ದವರು. (ಹೊರ. ೭. ೧೧.) ಇವರ ಹೆಸರುಗಳು ಯೆಹೂದ್ಯರಲ್ಲಿ ಪಾರಂಪರ್ಯವಾಗಿ ಬಂದವೆಂದು ತೋರುತ್ತದೆ. ಸತ್ಯವನ್ನು ವಿರೋಧಿಸಿ, ಸುಳ್ಳಾದ ಅದ್ಭುತಗಳಿಂದ ತಮ್ಮ ವಿರೋಧವನ್ನು ತೋರಿಸಿದ್ದರಲ್ಲಿಯೂ, ಕಡೆಯಲ್ಲಿ ಅವರು ಅಪಜಯ ಪಟ್ಟದ್ದರಲ್ಲಿಯೂ, ಈ ಮಂತ್ರವಾದಿಗಳಿಗೂ ಮೇಲೆ ಹೇಳಿದ ವಂಚಕರಿಗೂ ಅಧಿಕ ಸಮ್ಮಂಥವುಂಟು.

8. ಅವರ ವಂಚನೆಗೂ ವಿರೋಧಕ್ಕೂ ದೇವರು ಒಂದು ಮೇರೆಯನ್ನು ಇಟ್ಟಿರುವದರಿಂದ, ಅವರು ಅಧಿಕವಾಗಿ ಬಲ ಪಡದೆ ತಗ್ಗಿಸಲ್ಪಡುವರು.

9. ಇದು ಪಿಸಿದ್ಯ ದೇಶದಲ್ಲಿರುವ ಅಂತಿಯೋಕ್ಯವು. ಅಂತಿಯೋಕ್ಯ ಮುಂತಾದವುಗಳಲ್ಲಿ ಪೌಲನಿಗುಂಟಾದ ಹಿಂಸೆಯನ್ನು ಕುರಿತು, ಅಪೊ. ಕ್ರಿ. ೧೩, ೧೪. ಸಂಧಿಗಳ ವ್ಯಾಖ್ಯಾನ ನೋಡ ಬೇಕು.

10. ಆದಿಯಿಂದ ಈ ವರಿಗೂ ನನ್ನ ಶಿಷ್ಯನಾಗಿಯೂ ಸ್ನೇಹಿತನಾಗಿಯೂ ಇದ್ದ ನೀನು ನನಗೆ ಸಂಭವಿಸಿದ ಉಪದ್ರಗಳನ್ನೂ ನನ್ನ ನಡತೆಯನ್ನೂ ಚನ್ನಾಗಿ ಬಲ್ಲಿ ಎಂಬುವದು ಇದರ ತಾತ್ಪರ್ಯವು. (ಲೂಕ. ೧. ೩. ವಚನದ ವ್ಯಾಖ್ಯಾನ ನೋಡ ಬೇಕು.)

11. ನಮ್ಮ ಕರ್ತನು ನುಡಿದ ಸತ್ಯ ವಾಕ್ಯವು ಈ ವಚನದಲ್ಲಿ ಅಡಗಿ ಇದೆ. (ಯೋಹಾ. ೧೫. ೨೦.) ಆ ಸದ್ಗುರುವಿನ ಶಿಷ್ಯ

ಮನುಷ್ಯರೂ [1]ಮಂತ್ರಗಾರರೂ ಮೋಸಗೊಳಿಸುತ್ತಾ, [2]ಮೋಸ ಹೋಗುತ್ತಾ ಹೆಚ್ಚು ಹೆಚ್ಚಾಗಿ ಕೆಡು
ವರು.
೧೪ ಆದರೆ ನೀನು ಕಲಿತು ದೃಢವಾಗಿ ತಿಳುಕೊಂಡವುಗಳಲ್ಲಿ ನೆಲೆಯಾಗಿರು. [3]ಯಾರಿಂದ ಕಲಿತಿ ಎಂದೂ,
೧೫ ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದಿಂದ [4]ರಕ್ಷಣೆಗಾಗಿ ನಿನಗೆ ಜ್ಞಾನವನ್ನು ಕೊಡ ಶಕ್ತವಾದ ಪರಿಶುದ್ಧ
೧೬ ಬರಹಗಳನ್ನು ಚಿಕ್ಕಂದಿನಿಂದ ಅರಿತಿದ್ದೀ ಎಂದೂ, ನಿನಗೆ ತಿಳಿಯುತ್ತದಲ್ಲ? [5]ಬರಹವೆಲ್ಲಾ ದೈವಪ್ರೇರಿತವಾ
೧೭ ದದ್ದು, ಬೋಧನೆಗೂ, ಖಂಡನೆಗೂ, ತಿದ್ದುಪಾಟಿಗೂ, ನೀತಿಯ ಉಪದೇಶಕ್ಕೂ, ದೇವರ ಮನುಷ್ಯನು
ಎಲ್ಲಾ ಸತ್ಕ್ರಿಯೆಗಳಿಗೆ ಸಿದ್ಧನಾಗಿ, [6]ಆಯತ್ತನಾಗುವದಕ್ಕೂ ಪ್ರಯೋಜನವಾಗಿದೆ.

4. ಆದದರಿಂದ ದೇವರ ಮುಂದೆಯೂ, ತನ್ನ ಪ್ರತ್ಯಕ್ಷತೆಯಲ್ಲಿಯೂ ತನ್ನ ರಾಜ್ಯದಲ್ಲಿಯೂ ಬದುಕುವವರಿಗೂ
ಸತ್ತವರಿಗೂ ನ್ಯಾಯ ತೀರಿಸಲಿರುವ ಕರ್ತನಾದ ಯೇಸು ಕ್ರಿಸ್ತನ ಮುಂದೆಯೂ, [7]ನಾನು ಕೊಡುವ ಸಾಕ್ಷಿ
೨ ಏನಂದರೆ— ವಾಕ್ಯವನ್ನು ಸಾರು; ಸುಕಾಲದಲ್ಲಿಯೂ ಅಕಾಲದಲ್ಲಿಯೂ [8]ಎಡೆ ಬಿಡದೆ ಇರು; ಸಕಲ ದೀರ್ಘ
೩ ಶಾಂತಿಯಿಂದಲೂ ಉಪದೇಶದಿಂದಲೂ ಖಂಡಿಸಿ, ಗದರಿಸಿ, ಎಚ್ಚರಿಸು. ಯಾಕಂದರೆ ಅವರು ಸ್ವಸ್ಥ ಬೋಧನೆ
ಯನ್ನು ತಾಳದೆ, [9]ತೀಟೆ ಕಿವಿಗಳಾಗಿ, ಸ್ವಂತ ಇಚ್ಛೆಗಳ ಪ್ರಕಾರ ತಮಗೆ ತಾವೇ ಬೋಧಕರನ್ನು ಕೂಡಿಸಿ
೪ ಕೊಂಡು, ಸತ್ಯದ ಕಡೆಯಿಂದ ಕಿವಿಯನ್ನು ತಿರುಗಿಸಿ, ಕಟ್ಟುಕಥೆಗಳಿಗೆ ತಿರುಗಿ ಕೊಳ್ಳುವ ಸಮಯವು

ರಾಗಿ ಪರಿಶುದ್ಧವಾಗಿ ನಡಿಯುವ ಭಕ್ತರೆಲ್ಲರೂ ಹಿಂಸೆಯನ್ನು ತಾಳ ಬೇಕು. ಪೌಲನು ಅಂತಿಯೋಕ್ಯ ಮುಂತಾದ ಪಟ್ಟಣಗಳಲ್ಲಿ ಪ್ರಸಂಗಿಸಿದಾಗ ಅನೇಕ ಉಪದ್ರಗಳ ಮೂಲಕವಾಗಿ ದೇವರ ರಾಜ್ಯದಲ್ಲಿ ಪ್ರವೇಶಿಸ ಬೇಕೆಂಬ ಸತ್ಯವನ್ನು ಬೋಧಿಸಿದನು. ಕಳ್ಳಬೋಧಕರು ನಿಜ ಭಕ್ತಿಯಿಂದ ನಡಿಯ ಮನಸ್ಸಿಲ್ಲದವರಾಗಿದ್ದದರಿಂದ ಹಿಂಸೆಗೆ ತಪ್ಪಿಸಿ ಕೊಂಡರೆಂಬುವದು ಪೌಲನ ತಾತ್ಪರ್ಯವಾಗಿರುವದು.

1. ಈ ಮಂತ್ರಗಾರರನ್ನು ಕುರಿತು ೮ನೇ ವಚನದ ವ್ಯಾಖ್ಯಾನ ನೋಡ ಬೇಕು.

2. ಮತ್ತೊಬ್ಬರನ್ನು ಮೋಸಗೊಳಿಸುವವರು ತಾವೇ ಮೋಸ ಹೋಗುವರೆಂಬುವದು ದೇವರ ನೀತಿಗೆ ಹೊಂದಿದ ವಿಷಯವಾಗಿದೆ. (೨ ಥೆಸ್ಸ. ೨. ೧೧.)

3. ಯಾರಿಂದ ಎಂಬುವದು, ಎಳೇ ಪ್ರಾಯದಲ್ಲಿ ತಿಮೊಥೆಯನಿಗೆ ಬೋಧಿಸಿದ ಭಕ್ತಿಯುಳ್ಳ ಸಮ್ಮಂಧಿಕರನ್ನಾದರೂ, ತರುವಾಯ ಅವನಿಗೆ ಜ್ಞಾನೋಪದೇಶ ಮಾಡಿದ ಪೌಲನನ್ನಾದರೂ ಕುರಿತದ್ದು. ಮತ್ತೊಬ್ಬರು ಹ್ಯಾಗೆ ನಡೆದು ಕೊಂಡರೂ, ನೀನು ಭಕ್ತರಾದ ನಿನ್ನ ಬೋಧಕರಿಂದ ಕೇಳಿ ತಿಳುಕೊಂಡ ದೇವರ ಸತ್ಯದಲ್ಲಿ ನೆಲೆಯಾಗಿದ್ದು ಅದಕ್ಕನುಗುಣವಾಗಿ ನಡಿಯ ಬೇಕೆಂಬುವದೇ ಈ ವಚನದ ತಾತ್ಪರ್ಯವು.

4. ಇಲ್ಲಿ ಹೇಳಲ್ಪಡುವ "ರಕ್ಷಣೆಗಾಗಿ ಜ್ಞಾನವನ್ನು ಕೊಡ ಶಕ್ತವಾದ ಪರಿಶುದ್ಧ ಬರಹಗಳು" ಎಂಬುವದು ಹಳೇ ಒಡಂಬಡಿಕೆಯನ್ನು ಕುರಿತದ್ದು. ಅದು ಕ್ರಿಸ್ತನನ್ನು ಕುರಿತು ಸಾಕ್ಷಿ ಕೊಟ್ಟಿತು. (ಯೋಹಾ. ೫. ೩೯.) ಆತನನ್ನು ಕುರಿತು ಸಾಕ್ಷಿ ಕೊಟ್ಟ ಹಳೇ ಒಡಂಬಡಿಕೆಯು ಭಕ್ತಿಯ ಅಭಿವೃದ್ಧಿಗೆ ಪ್ರಯೋಜನವಾದದ್ದಾಗಿದ್ದರೆ, ಆತನ ಕೃಪಾಸ್ವರೂಪವನ್ನು ಪೂರ್ಣವಾಗಿ ಪ್ರಕಟ ಮಾಡುವ ಹೊಸ ಒಡಂಬಡಿಕೆಯು ಈ ವಿಷಯದಲ್ಲಿ ಎಷ್ಟೋ ಪ್ರಯೋಜನವಾಗಿರುವದು. ಸುಳ್ಳುಬೋಧನೆಯಿಂದ ತೊಲಗುವದಕ್ಕೂ, ದಿವ್ಯ ಸತ್ಯಗಳಲ್ಲಿ ಪ್ರವೀಣನಾಗಿ ಭಕ್ತಿಯಲ್ಲಿ ಬೆಳೆಯುವದಕ್ಕೂ, ವೇದವಾಕ್ಯಗಳನ್ನು ಜಪಧ್ಯಾನದಿಂದ ಓದುವದೇ ತಕ್ಕಯತ್ನವು. ಯೆಹೂದ್ಯರ ಮಕ್ಕಳು ಮಾತಾಡ ಪ್ರಾರಂಭಿಸುವಾಗಲೇ ವೇದವನ್ನು ಕಲಿಯುವ ಪ್ರಕಾರ ಕ್ರೈಸ್ತರ ಮಕ್ಕಳೆಲ್ಲರೂ ವೇದವನ್ನು ಕಲಿತರೆ, ಎಷ್ಟೋ ಪ್ರಯೋಜನವಾಗುವದು.

5. ಬರಹವೆಲ್ಲಾ ಎಂಬುವದು ಸತ್ಯವೇದದ ಬರಹಗಳನ್ನು ಕುರಿತದ್ದು. ಒಂದೊಂದು ಬರಹವು ದೇವರ ಆತ್ಮನಿಂದ ಅನುಗ್ರಹಿಸಲ್ಪಟ್ಟದ್ದಾಗಿಯೂ ರಕ್ಷಣೆಗೆ ಜ್ಞಾನವನ್ನು ಕೊಡ ತಕ್ಕದ್ದಾಗಿಯೂ ಇದೆ.

6. ಭಕ್ತರು ತೇರಿ ಪರಮ ಪದವಿಗೆ ಪಕ್ವವಾಗುವದೇ ದೇವರ ಆತ್ಮನು ಅನುಗ್ರಹಿಸಿದ ವೇದಬರಹಗಳ ಮುಖ್ಯ ಗುರಿಯು.

7. ಬದುಕುವವರನ್ನೂ ಸತ್ತವರನ್ನೂ ನ್ಯಾಯವಿಚಾರಿಸುವ ಸರ್ವಲೋಕದ ನ್ಯಾಯಾಧಿಪತಿಯ ಪ್ರಸನ್ನತೆಯನ್ನೂ ಆತನ ರಾಜ್ಯವನ್ನೂ ಸಾಕ್ಷಿಯಾಗಿಟ್ಟು ಕೊಡಲ್ಪಡುವ ಕಟ್ಟಳೆ ಸಾಮಾನ್ಯವಾದದ್ದಲ್ಲ. (ಅಪೊ. ಕ್ರಿ. ೧೦. ೪೨.)

8. ಝಾವ ಕಾಯುವವನು ನಿದ್ರೆಗೆ ಅವಕಾಶ ಕೊಡದೆ ಜಾಗ್ರತೆಯಾಗಿರುವ ಪ್ರಕಾರ ದೇವರ ಸೇವಕನು ಕಾಲವನ್ನು ಜಾಗ್ರತೆಯಾಗಿ ಕಾದು ಕೊಳ್ಳ ಬೇಕು. ಕಟ್ಟುಕಥೆಗಳನ್ನಲ್ಲ, ದೇವರ ವಾಕ್ಯವನ್ನು ಪ್ರಸಂಗಿಸುವದಕ್ಕೆ ಏರ್ಪಟ್ಟವರು ಎಲ್ಲಾ ಸಮಯಗಳಲ್ಲಿಯೂ ಸಿದ್ಧವಾಗಿರ ಬೇಕು. ಮತ್ತು ಅಂಥಾ ಸಮಯಗಳನ್ನು ಹುಡುಕಿ ಕಂಡು ಕೊಳ್ಳ ಬೇಕು. ಮತ್ತು ಅವರು ವಿವೇಕವುಳ್ಳ ಪಂಡಿತರ ಹಾಗೆ ಬಹು ತಾಳ್ಮೆಯಿಂದ ಜನರ ಸ್ಥಿತಿಗೆ ತಕ್ಕದ್ದಾಗಿ ಅವರನ್ನು ಖಂಡಿಸಿ ನಯ ಭಯಗಳಿಂದ ಅವರಿಗೆ ಬೋಧಿಸ ಬೇಕು.

9. ತಮ್ಮ ದುರಿಚ್ಛೆಗಳಿಗೆ ತಕ್ಕ ನೂತನ ವಿಷಯಗಳನ್ನು ಹೇಳುವ ಬೋಧಕರ ಬಳಿಯಲ್ಲಿ ತಮ್ಮ ಕಿವಿಯ ತೀಟೆಯನ್ನು ತೀರಿಸಿ ಕೊಳ್ಳುವದಕ್ಕೆ ಓಡುವವರು ಸ್ವಸ್ಥ ಬೋಧನೆಯನ್ನು ತಳ್ಳಿ ಮನುಷ್ಯರ ಕಟ್ಟುಕಥೆಗಳನ್ನು ಅನುಸರಿಸುವರು.



೫ ಬರುವದು. ಆದರೆ ನೀನು ಎಲ್ಲವುಗಳಲ್ಲಿ ಎಚ್ಚತ್ತಿದ್ದು, ಶ್ರಮೆ ತಾಳಿ, ಸುವಾರ್ತಿಕನ ಕೆಲಸವನ್ನು ಮಾಡಿ,
ನಿನ್ನ [1]ಸೇವೆಯನ್ನು ಪೂರೈಸು.
೬, ೭ [2]ಯಾಕಂದರೆ ಈಗಲೇ [3]ಅರ್ಪಿಸಲ್ಪಡುತ್ತೇನೆ. ನಾನು ಬಿಟ್ಟು ಹೋಗುವ ಸಮಯ ಬಂದದೆ. ಒಳ್ಳೇ
೮ ಹೋರಾಟವನ್ನು [4]ಹೋರಾಡಿದ್ದೇನೆ; ಓಟವನ್ನು ತೀರಿಸಿದ್ದೇನೆ; [5]ವಿಶ್ವಾಸವನ್ನು ಕೈಕೊಂಡಿದ್ದೇನೆ. ಇನ್ನು
ಮೇಲೆ [6]ನೀತಿಯ ಕಿರೀಟವು ನನಗೋಸ್ಕರ ಇಟ್ಟದೆ; ಆ ದಿನದಲ್ಲಿ ನೀತಿಯುಳ್ಳ ನ್ಯಾಯಾಧಿಪತಿಯಾದ ಕರ್ತನು
ಅದನ್ನು ನನಗೆ ಕೊಡುವನು; ನನಗೆ ಮಾತ್ರವಲ್ಲ, ಅವನ ಪ್ರತ್ಯಕ್ಷತೆಯನ್ನು ಪ್ರೀತಿ ಮಾಡಿರುವವರೆಲ್ಲರಿಗೂ ಸಹ.

ವಂದನೆ; ಅಂತ್ಯೋಕ್ತಿಯು.

೯, ೧೦ [7]ಬೇಗ ನನ್ನ ಹತ್ತರ ಬರ ಜಾಗ್ರತೆಯಾಗಿರು. ಯಾಕಂದರೆ [8]ದೇಮನು ಈಗಿನ ಯುಗವನ್ನು ಪ್ರೀತಿ
ಮಾಡಿ, ನನ್ನನ್ನು ಬಿಟ್ಟನು. ಅವನು ಥೆಸ್ಸಲೊನೀಕಕ್ಕೂ, [9]ಕ್ರೆಸ್ಕನು ಗಲಾತ್ಯಕ್ಕೂ, ತೀತನು [10]ದಲ್ಮಾತ್ಯ
೧೧ ಕ್ಕೂ, ಹೊರಟು ಹೋದರು. ಲೂಕನು ಮಾತ್ರ ನನ್ನ ಸಂಗಡ ಇದ್ದಾನೆ. ಮಾರ್ಕನನ್ನು ಶೇರಿಸಿ ಕರ
೧೨ ಕೊಂಡು ಬಾ; ಯಾಕಂದರೆ ಅವನು ನನಗೆ ಸೇವೆಗೋಸ್ಕರ [11]ಪ್ರಯೋಜಕನಾಗಿದ್ದಾನೆ. ತುಕಿಕನನ್ನು
[12]ಎಫೆಸಕ್ಕೆ ಕಳುಹಿಸಿದ್ದೇನೆ.
೧೩ ನಾನು ತ್ರೋಯದಲ್ಲಿ ಕರ್ಪನ ಹತ್ತರ ಬಿಟ್ಟು ಬಂದ [13]ಮೇಲಂಗಿಯನ್ನೂ, ಪುಸ್ತಕಗಳನ್ನೂ, ಮುಖ್ಯವಾಗಿ
ತೊಗಲುಕಾಗದಗಳನ್ನೂ, ಬರುವಾಗ, ತೆಗೆದು ಕೊಂಡು ಬಾ.

1. ಸುವಾರ್ತೆಯ ಸೇವೆಯನ್ನು ಪೂರೈಸುವದಕ್ಕೆ ಎಲ್ಲವುಗಳಲ್ಲಿ ಮನೋನಿರ್ಮಲತ್ವವೂ, ಹಿಂಸೆಯನ್ನು ಸಹಿಸುವ ಮನಸ್ಸೂ ಇರ ಬೇಕು. (ಎಫೆ. ೪. ೧೧. ವಚನದ ವ್ಯಾಖ್ಯಾನ ನೋಡ ಬೇಕು.) ಕಟ್ಟುಕಥೆಗಳಿಗೆ ತಿರುಗುವ ಕಾಲವು ಬರುವದು ನಿಜವಾದಾಗ್ಯೂ, ಅದು ಸುವಾರ್ತಿಕನ ಅಜಾಗ್ರತೆಯಿಂದ ಬರುವದಾದರೆ, ಎಷ್ಟೋ ಭಯಂಕರವಾಗಿರುವದು.

2. ೬—೮. ವರಿಗೂ ಇರುವ ವಚನಗಳಲ್ಲಿ ಪೌಲನು ತನಗೆ ನಿಶ್ಚಯವಾಗಿ ಮರಣ ಪ್ರಾಪ್ತಿಸುವದೆಂದೂ, ತನ್ನ ಪ್ರಯಾಸಕ್ಕೂ ಉಪದ್ರಕ್ಕೂ ತಕ್ಕ ಫಲವು ದೇವರಿಂದ ತನಗುಂಟಾಗುವದೆಂದೂ, ಮನಸ್ಸು ಪರವಶವಾಗ ತಕ್ಕ ಮಾತುಗಳನ್ನು ಹೇಳಿ, ತಿಮೊಥೆಯನು ಸಹ ಅಂಥ ಪ್ರಯಾಸವನ್ನೂ ಉಪದ್ರವನ್ನೂ ಸಹಿಸಿ, ದೇವರ ಸೇವೆಯನ್ನು ನಡಿಸಿದರೆ, ಕಡೆಯಲ್ಲಿ ಪರಮ ಪದವಿಗೆ ಶೇರ ಬಹುದೆಂದೂ ಹೇಳುತ್ತಾನೆ.

3. ಪಾನದರ್ಪಣೆಯ ಹಾಗೆ, ಅವನು ತನ್ನ ರಕ್ತವು ತನ್ನ ಕರ್ತನಿಗಾಗಿ ಹೊಯ್ಯಲ್ಪಡುವಕಾಲವು ಸಮೀಪವಾದದರಿಂದ ಹೀಗೆ ಹೇಳುತ್ತಾನೆ. (ಫಿಲಿ. ೨. ೧೭. ವಚನದ ವ್ಯಾಖ್ಯಾನ ನೋಡ ಬೇಕು.)

4. ಗ್ರೇಕರ ಆಟಗಳಲ್ಲಿ ನಡೆದ ಮಲ್ಲಯುದ್ಧದ ಹಾಗೆ ಪೌಲನು ಯುದ್ಧ ಮಾಡಿದನು. (೧ಕೊರಿ. ೯. ೨೬. ೧ತಿಮೊ. ೬. ೧೨. ೨ತಿಮೊ. ೨. ೫. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.)

5. ಪೌಲನು ತನಗೆ ಒಪ್ಪಿಸಲ್ಪಟ್ಟ ಜ್ಞಾನದ ಬೊಕ್ಕಸವಾದ ವಿಶ್ವಾಸಕ್ಕೆ ನಷ್ಟ ಬಾರದಂತೆ ಅದನ್ನು ಕಾದು ಕೊಂಡನು.

6. ನೀತಿಮಾರ್ಗದಲ್ಲಿ ಸ್ಥಿರವಾಗಿ ನಿಂತು ಕಡೇ ಮಟ್ಟಿಗೂ ಹೋರಾಡುವವರಿಗೆ ಈ ಕಿರೀಟವು ದೊರಕುವದು. ಹೋರಾಡುವವರಿಗೆ ಇದನ್ನು ಕೊಡುವದಕ್ಕೆ ದೇವರು ಕಾದುಕೊಂಡಿದ್ದಾನೆ. (ಪ್ರಕಟ. ೨. ೧೦.) ಮತ್ತು ಕರ್ತನ ಬರುವಿಕೆಯನ್ನು ನಿರೀಕ್ಷಿಸಿ ನಂಬಿಕೆಯಿಂದ ಹೋರಾಡುವವರೆಲ್ಲರಿಗೂ ಅದು ದೊರಕುವದು. (ಪ್ರಕಟ. ೧೧. ೧೮.) ಇದನ್ನು ನೆನಸಿ ಪೌಲನು ಎಷ್ಟೋ ಆನಂದವಾಗಿದ್ದನು.

7. ನನಗೆ ಮರಣ ಸಮೀಪವಾಗಿರುವದರಿಂದಲೂ, ಲೂಕನ ಹೊರ್ತು, ಮಿಕ್ಕಾದವರೆಲ್ಲರೂ ನನ್ನನ್ನು ಬಿಟ್ಟು ಹೋದದರಿಂದಲೂ, (೧೧. ವ.) ನೀನು ಶೀಘ್ರವಾಗಿ ನನ್ನ ಬಳಿಗೆ ಬರ ಜಾಗ್ರತೆ ಪಡು ಎಂದು ಪೌಲನು ಹೇಳುತ್ತಾನೆ.

8. ದೇಮನನ್ನು ಕುರಿತು ಕೊಲೊಸ್ಸೆಯರ ಪತ್ರಿಕೆಯಲ್ಲಿಯೂ ಫಿಲೆಮೋನನ ಪತ್ರಿಕೆಯಲ್ಲಿಯೂ ಸಹೋದರಭಾವವಾಗಿ ಎಣಿಸಿ ಬರೆಯಲ್ಪಟ್ಟದೆ. (ಕೊಲೊ. ೪. ೧೪. ಫಿಲೆಮೋ. ೨೪. ವ.) ಇಲ್ಲಿ ಅವನು ಈಗಿನ ಯುಗವನ್ನು ಪ್ರೀತಿ ಮಾಡಿ ಪೌಲನನ್ನು ಬಿಟ್ಟು ಹೋದನೆಂದು ಬರೆದದೆ. ಪೌಲನಿಗೆ ಮರಣ ಸಮೀಪವಾಗಿದ್ದದರಿಂದ ತನಗೂ ಮರಣ ಪ್ರಾಪ್ತಿಯಾಗುವದೆಂದು ಭಯಪಟ್ಟು ಹೋಗಿರುವನು. ಅವನು ಪೂರ್ಣವಾಗಿ ಕ್ರಿಸ್ತನ ಮಾರ್ಗವನ್ನು ಬಿಟ್ಟು ಬಿಟ್ಟನೆಂದು ಹೇಳ ಕೂಡದೆ ಇದ್ದಾಗ್ಯೂ, ಲೌಕಿಕಪ್ರೀತಿಯಿಂದ ಒಂದು ವೇಳೆ ವ್ಯಾಪಾರ ವಿಷಯವಾಗಿ ಥೆಸ್ಸಲೊನೀಕಕ್ಕೆ ಹೋಗಿರುವನು. ಇದರಿಂದ ಲೋಕದ ಪ್ರೀತಿಯುಳ್ಳವನಲ್ಲಿ ತಂದೆಯ ಪ್ರೀತಿ ಇರಲಾರದೆಂದು ತಿಳಿಯ ಬೇಕು. (೧ ಯೋಹಾ. ೨. ೧೫.)

9. ಕ್ರೆಸ್ಕನೂ ತೀತನೂ ಪೌಲನನ್ನು ಬಿಟ್ಟು ಹೋದ ಕಾರಣವೇನೋ ತಿಳಿಯದು. ಒಂದು ವೇಳೆ ತಮ್ಮ ಕೆಲಸದ ನಿಮಿತ್ತ ಹೋಗಿರುವರು.

10. ದಲ್ಮಾತ್ಯ ಎಂಬುವದು ಇಲ್ಲುರಿಕ ದೇಶದಲ್ಲಿರುವಂಥ, ವೇನಿಸ್ ಕೊಲ್ಲಿಯ ಪೂರ್ವ ಥಡದಲ್ಲಿರುವಂಥ ಒಂದು ನಾಡು.

11. ಒಂದು ಕಾಲದಲ್ಲಿ ದೇವರ ಸೇವೆಯಲ್ಲಿ ಅಪ್ರಯೋಜಕನಾಗಿದ್ದ ಮಾರ್ಕನು ತರುವಾಯ ಬಹು ಪ್ರಯೋಜಕನಾದನು. ಮಾರ್ಕನ ಸುವಾರ್ತೆಯ ಪೀಠಿಕೆಯಲ್ಲಿ ನೋಡ ಬೇಕು.

12. ತಿಮೊಥೆಯನು ಎಫೆಸದಲ್ಲಾದರೂ ಅದಕ್ಕೆ ಸಮೀಪದಲ್ಲಾದರೂ ಇದ್ದರೆ, ತುಕಿಕನು ಅಲ್ಲಿಗೆ ಮುಟ್ಟಿದಾಗಲೇ ತಿಮೊಥೆಯನು ರೋಮಪುರಿಗೆ ಹೊರಟು ಹೋಗುವದಕ್ಕೆ ಅನುಕೂಲವಾಗುವದು.

13. ದಪ್ಪವಾದ ಬಟ್ಟೆಯಿಂದ ಮಾಡಲ್ಪಟ್ಟ ಮೇಲಂಗಿಯು ಬರುವ ಛಳಿಗಾಲಕ್ಕೆ ಬಹಳ ಉಪಯೋಗವಾಗಿರುವದು. (೨೧. ವ.) ಇಲ್ಲಿ ಹೇಳಲ್ಪಟ್ಟ ಪುಸ್ತಕಗಳು ಪಪೈರಸ್ ಎಂಬ ಒಂದು ವಿಧ ಮರದ ಪಟ್ಟೆಯಿಂದ ಮಾಡಲ್ಪಟ್ಟ ಪುಸ್ತಕಗಳಾಗಿರುವವು. ತೊಗಲುಕಾಗದಗಳು ಅಂದರೆ, ಹದ ಮಾಡಿದ ಬರೆಯಲ್ಪಟ್ಟ ತೊಗಲು ಸುರುಳಿಗಳು.

೧೪ ಕಂಚುಗಾರನಾದ [1]ಅಲೆಕ್ಸಾಂದ್ರನು ನನ್ನನ್ನು ಬಹಳ ತೊಂದರೆ ಪಡಿಸಿದನು. ಅವನ ಕೃತ್ಯಗಳ ಹಾಗೆ,
೧೫ ಕರ್ತನು ಅವನಿಗೆ ಬದಲು ಕೊಡಲಿ. ಅವನಿಗೆ ನೀನು ಸಹ ಎಚ್ಚರವಾಗಿರು. ಯಾಕಂದರೆ ಬಹಳವಾಗಿ
[2]ನಮ್ಮ ಮಾತುಗಳನ್ನು ವಿರೋಧಿಸಿದ್ದಾನೆ.
೧೬ [3]ನನ್ನ ಮೊದಲನೇ ಪ್ರತ್ಯುತ್ತರದಲ್ಲಿ ಯಾರೂ ನನ್ನ ಸಹಾಯಕ್ಕೆ ಬರಲಿಲ್ಲ; ಎಲ್ಲರೂ ನನ್ನನ್ನು ಬಿಟ್ಟು
೧೭ ಹೋದರು. ಅದು ಅವರಿಗೆ ಎಣಿಸಲ್ಪಡದಿರಲಿ. ಆದಾಗ್ಯೂ ಕರ್ತನು ನನ್ನ ಬಳಿಯ ನಿಂತು, ನನ್ನಿಂದ ಪ್ರ
ಸಂಗವು ಪೂರೈಸಲ್ಪಡುವ ಹಾಗೆಯೂ, ಜನಾಂಗಗಳೆಲ್ಲಾ ಕೇಳುವ ಹಾಗೆಯೂ, ನನ್ನನ್ನು ಬಲ ಪಡಿಸಿದನು;
೧೮ ಮತ್ತು [4]ಸಿಂಹದ ಬಾಯಿಯಿಂದ ತಪ್ಪಿಸಲ್ಪಟ್ಟೆನು. ಮತ್ತು ಕರ್ತನು ಸಕಲ [5]ದುಷ್ಕ್ರಿಯೆಗಳಿಂದ ನನ್ನನ್ನು
ತಪ್ಪಿಸಿ, ಪರಲೋಕದಲ್ಲಿರುವ ತನ್ನ ರಾಜ್ಯದ ವರೆಗೆ ರಕ್ಷಿಸುವನು. ಅವನಿಗೆ ಯುಗ ಯುಗಾಂತರಗಳಿಗೂ
ಮಹಿಮೆಯು ಆಗಲಿ. ಆಮೆನ್.
೧೯, ೨೦ [6]ಪ್ರಿಸ್ಕಳನ್ನೂ ಅಕ್ವಿಲನನ್ನೂ ಒನೆಸಿಫೊರನ ಮನೆಯನ್ನೂ ವಂದಿಸು. ಎರಸ್ತನು ಕೊರಿಂಥದಲ್ಲಿ ನಿಂ
೨೧ ತನು. [7]ತ್ರೊಫಿಮನನ್ನು [8]ಅಸೌಖ್ಯವಾಗಿ ಮಿಲೇತದಲ್ಲಿ ಬಿಟ್ಟೆನು. [9]ಹಿಮಕಾಲಕ್ಕೆ ಮುಂಚೆ ಬರ ಎಚ್ಚರಿ
ಕೆಯಾಗಿರು.
ಯುಬೂಲನೂ, ಪೂದೆಯನೂ, ಲೀನನೂ, [10]ಕ್ಲಾದ್ಯಳೂ, ಸಹೋದರರೆಲ್ಲರೂ ನಿನ್ನನ್ನು ವಂದಿಸುತ್ತಾರೆ.
೨೨ ಕರ್ತನಾದ ಯೇಸು ಕ್ರಿಸ್ತನು ನಿನ್ನ ಆತ್ಮದ ಸಂಗಡ ಇರಲಿ. [11]ಕೃಪೆಯು ನಿಮ್ಮ ಸಂಗಡ ಇರಲಿ. ಆಮೆನ್.

1. ಇವನು ಅಪೊ. ಕ್ರಿ. ೧೯. ೩೩ಲ್ಲಿ ಹೇಳಲ್ಪಟ್ಟ ಅಲೆಕ್ಸಾಂದ್ರನೆಂದು ತೋರುತ್ತದೆ. ಇವನು ಪೌಲನನ್ನು ವಿರೋಧಿಸಿದ ಪ್ರಕಾರ ತಿಮೊಥೆಯನನ್ನು ಸಹ ವಿರೋಧಿಸಿರುವನು. ದೇವರ ಸೇವಕರನ್ನು ವಿರೋಧಿಸುವವರಿಗೆ ದೇವರ ಕೋಪವು ಅಗತ್ಯವಾಗಿ ಬರುವದು. (ಕೀರ್ತ. ೫. ೧೦. ೧ ತಿಮೊ. ೧. ೧೯, ೨೦.)

2. ದೇವರ ಸೇವಕರು ಸುವಾರ್ತೆಯನ್ನು ಪ್ರಸಂಗಿಸುವ ಸಮಯದಲ್ಲಿ ಅವರ ವಾಕ್ಯಗಳನ್ನು ಎದುರಿಸುವ ದುರ್ಮಾರ್ಗರ ಕ್ರಿಯೆಗಳಿಗೆ ತಕ್ಕ ಪ್ರತಿಫಲವನ್ನು ಕೊಡುವದು ದೇವರ ನೀತಿಗೆ ತಕ್ಕದ್ದಾಗಿದೆ.

3. ಇದು ಪೌಲನು ತಾನು ಸುವಾರ್ತೆಯ ಸತ್ಯಕ್ಕೆ ಸಾಕ್ಷಿಯಾಗಿ ನೇರೋ ಕೈಸರನ ಮುಂದೆ ಮೊದಲನೇ ಸಾರಿ ಪ್ರತ್ಯುತ್ತರ ಹೇಳಿದ್ದನ್ನು ಕುರಿತದ್ದು. ತನ್ನ ಕಡೆ ನಿಂತು ಸಹಾಯ ಮಾಡುವರೆಂದು ಪೌಲನು ನಂಬಿ ಇದ್ದ ಕೆಲವು ಸ್ನೇಹಿತರು ಅರಸನಿಗೆ ಭಯ ಪಟ್ಟು ತೊಲಗಿ ಹೋದರು. ಹೀಗೆ ಮನುಷ್ಯರು ಆತನನ್ನು ಕೈಬಿಟ್ಟರೂ, ನಂಬಿದ ಭಕ್ತರನ್ನು ಆದರಿಸುವ ಕರ್ತನು ಅವನನ್ನು ಕೈಬಿಡದೆ ರಾಜಸಭೆಯಲ್ಲಿಯೂ ಸುವಾರ್ತೆಯ ಸತ್ಯಗಳನ್ನು ಧೈರ್ಯವಾಗಿ ಹೇಳುವಂತೆ ಅವನನ್ನು ಬಲ ಪಡಿಸಿದನು. (ಅಪೊ. ಕ್ರಿ. ೧೮. ೯; ೨೭. ೨೩.)

4. ಇದಕ್ಕೆ ವಿದ್ವಾಂಸರು ನಾನಾ ವಿಧ ತಾತ್ಪರ್ಯಗಳನ್ನು ಹೇಳುವರು. ಇದು ನೇರೋ ಎಂಬ ಚಕ್ರವರ್ತಿಯ ಅಪ್ಪಣೆಯಿಂದ ಕ್ರೈಸ್ತರನ್ನು ಕೊಂದ ಸಿಂಹಗಳನ್ನು ಕುರಿತದ್ದೆಂದೂ, ಘರ್ಜಿಸುವ ಸಿಂಹವಾದ ಸೈತಾನನನ್ನು ಕುರಿತದ್ದೆಂದೂ, (೧ ಪೇತ್ರ. ೫. ೮.) ಪೌಲನಿಗೆ ಸಂಭವಿಸಲಿಕ್ಕಿದ್ದ ಮರಣದ ಅಪಾಯವನ್ನು ಕುರಿತದ್ದೆಂದೂ, ನಾನಾ ಅರ್ಥಗಳನ್ನು ಹೇಳುವರು.

5. ಪೌಲನು ಕ್ರಿಸ್ತನ ಮೇಲೆ ಇಟ್ಟಿದ್ದ ಸ್ಥಿರವಾದ ನಂಬಿಕೆಯನ್ನು ಕೆಡಿಸುವ ಹಾಗೆ ಶತ್ರುಗಳು ಮಾಡಿದ ಪ್ರಯತ್ನಗಳೆಲ್ಲಾ ದುಷ್ಕ್ರಿಯೆಗಳೇ. ಅವುಗಳಿಂದ ಕೃಪೆಯುಳ್ಳ ದೇವರು ಅವನನ್ನು ರಕ್ಷಿಸಿದನು. ಮತ್ತು ಅವನನ್ನು ಪರಮ ರಾಜ್ಯಕ್ಕೆ ಪಕ್ವವಾಗ ಮಾಡಿದ್ದರಿಂದಲೂ ಆತನನ್ನು ಮನೋತ್ಸಾಹದಿಂದ ಸ್ತುತಿಸುತ್ತಾನೆ.

6. ಅಪೊ. ಕ್ರಿ. ೧೮. ೨. ವಚನದ ವ್ಯಾಖ್ಯಾನ ನೋಡ ಬೇಕು.

7. ತ್ರೊಫಿಮನು ಪೌಲನ ಸಂಗಡ ಯೆರೂಸಲೇಮಿಗೆ ಹೋಗಿದ್ದನು. (ಅಪೊ. ಕ್ರಿ. ೨೧. ೨೯.) ಅಪೊಸ್ತಲರ ಕ್ರಿಯೆಗಳ ಕಡೇ ಸಂಧಿಯಲ್ಲಿ ಹೇಳಲ್ಪಟ್ಟ ಬಂಧನದ ತರುವಾಯ ಪೌಲನು ಆಸ್ಯದಲ್ಲಿ ಪ್ರಯಾಣ ಮಾಡಿದನೆಂಬದಾಗಿ ಹೇಳುವ ಕೆಲವರ ಅಭಿಪ್ರಾಯಕ್ಕೆ ಇಲ್ಲಿ ಒಂದು ವಿಧ ಆಧಾರವುಂಟು.

8. ವಾಶಿ ಮಾಡುವ ವರವು (೧ ಕೊರಿ. ೧೨. ೯.) ಆ ಕಾಲದಲ್ಲಿದ್ದ ದೇವರ ಸೇವಕರಲ್ಲಿ ಯಾವಾಗಲೂ ತೋರಲಿಲ್ಲವೆಂದು ಇದರಿಂದ ತಿಳಿಯ ಬಹುದು. ದೇವರ ಕೃಪೆ ಹೊಂದಿದವರೆಂಬುವದಕ್ಕೆ ಗುರುತಾಗಿಯೂ, ಸುವಾರ್ತೆಯ ಸತ್ಯಕ್ಕೆ ಸಾಕ್ಷಿಯಾಗಿಯೂ, ಕ್ರಿಸ್ತನ ಮಹಿಮೆಗೆ ದೃಷ್ಟಾಂತವಾಗಿಯೂ ಈ ಅದ್ಭುತ ವರಗಳು ಆ ಕಾಲದಲ್ಲಿ ಪ್ರಕಟವಾದವೇ ಹೊರ್ತು ಬೇರೆ ಅಲ್ಲ. ಅವು ಎಲ್ಲಾ ಸಮಯಗಳಲ್ಲಿಯೂ ತೋರುವ ಹಾಗಿದ್ದರೆ, ದೇವರ ಸೇವೆಯಲ್ಲಿ ಬಹು ಪ್ರಯೋಜಕನಾಗಿದ್ದ ತ್ರೊಫಿಮನನ್ನು ಅಸೌಖ್ಯವಾಗಿ ಮಿಲೇತದಲ್ಲಿ ಬಿಡಲಾರನು.

9. ಹಿಮಕಾಲದಲ್ಲಿ ಹಡಗಯಾತ್ರೆ ನಡಿಯಲಾರದ ಕಾರಣ (ಅಪೊ. ಕ್ರಿ. ೨೭. ೧೨.) ಅದಕ್ಕೆ ಮುಂಚೆ ಬರ ಬೇಕೆಂದು ಹೇಳುತ್ತಾನೆ.

10. ಯುಬೂಲನೂ ಪೂದೆಯನೂ ಯಾರೋ ತಿಳಿಯದು. ಲೀನನು ರೋಮ ಸಭೆಗೆ ಮೊದಲನೇ ಅಧ್ಯಕ್ಷನಾಗಿದ್ದವನೆಂದೂ, ಕ್ಲಾದ್ಯಳು ಬ್ರಿಟಾನ್ಯ ದ್ವೀಪದವಳೂ, ರೋಮಾಯ ಶೇರ್ವೆಗಾರನಾದ ಪೂದೆಯನ ಹೆಂಡತಿಯೂ ಆಗಿದ್ದವಳೆಂದೂ ಕೆಲವರು ನೆನಸುತ್ತಾರೆ.

11. ಇದು ತಿಮೊಥೆಯನನ್ನೂ ಅವನ ಸಂಗಡ ದೇವರ ಸೇವೆ ಮಾಡಿದವರನ್ನೂ ಕುರಿತದ್ದು.

# THE EPISTLE OF PAUL THE APOSTLE TO TITUS.

## ಅಪೊಸ್ತಲನಾದ ಪೌಲನು ತೀತನಿಗೆ ಬರೆದ ಪತ್ರಿಕೆಯ ಪೀಠಿಕೆ.

ತೀತನನ್ನು ಕುರಿತು ಅಪೊಸ್ತಲನಾದ ಪೌಲನ ಪತ್ರಿಕೆಗಳಲ್ಲಿ ಹೇಳಿರುವ ಕೆಲವು ವರ್ತಮಾನಗಳ ಹೊರ್ತು, ಅವನನ್ನು ಕುರಿತ ಬೇರೆ ವರ್ತಮಾನಗಳೇನೂ ತಿಳಿಯದು. ಅವನ ತಂದೆ ತಾಯಿಗಳು ಅನ್ಯ ಜನಾಂಗದವರಾಗಿದ್ದರು. (ಗಲಾ. ೨. ೩.) ಅವನು ಪೌಲನಿಂದ ಗುಣ ಪಟ್ಟವನು. (ತೀತ. ೧. ೪.) ಅವನು ಹೀಗೆ ಕ್ರೈಸ್ತನಾದ ಕಾಲ ಮೊದಲ್ಗೊಂಡು ಪೌಲನ ಸಂಗಡ ಕೂಡಿ ಕೊಂಡು, ದೇವರ ಸೇವೆಯನ್ನು ಭಕ್ತಿವೈರಾಗ್ಯದಿಂದ ಮಾಡುತ್ತಾ ಬಂದನು. (೨ ಕೊರಿ. ೮. ೨೩.) ಜನಾಂಗಗಳಲ್ಲಿ ಕ್ರೈಸ್ತರಾದವರು ಮೋಶೆಯ ನ್ಯಾಯಪ್ರಮಾಣವನ್ನು ಕೈಕೊಳ್ಳ ಬೇಕಾದದ್ದು ಅವಶ್ಯವೋ? ಎಂಬ ವಿಷಯವನ್ನು ಕುರಿತು ತೀರ್ಪು ಮಾಡುವದಕ್ಕಾಗಿ ಯೆರೂಸಲೇಮಿನಲ್ಲಿ ಕೂಡಿದ ಸಂಘಕ್ಕೆ ತೀತನು ಪೌಲ ಬಾರ್ನಬ ಎಂಬವರ ಸಂಗಡ ಹೋಗಿದ್ದನು. (ಗಲಾ. ೨. ೧. ವಚನದ ವ್ಯಾಖ್ಯಾನ ನೋಡ ಬೇಕು.) ತರುವಾಯ ಅವನು, ಕೊರಿಂಥ್ಯರಿಗೆ ಪೌಲನು ಮೊದಲನೇ ಪತ್ರಿಕೆಯಲ್ಲಿ ಬರೆದ ಕಟ್ಟಳೆಗಳ ಪ್ರಕಾರ ಕೊರಿಂಥದ ಸಭೆಯವರು ನಡಿಯುತ್ತಾರೋ ಇಲ್ಲವೋ ಎಂದು ನೋಡುವದಕ್ಕಾಗಿಯೂ, ಯೆಹೂದದಲ್ಲಿ ಬಡ ಕ್ರೈಸ್ತರಿಗಾಗಿ ಧರ್ಮ ಸಹಾಯವನ್ನು ಹೊಂದುವದಕ್ಕಾಗಿಯೂ, ಕೊರಿಂಥಕ್ಕೆ ಹೋದನು. (೨ ಕೊರಿ. ೨. ೧, ೨, ೧೩; ೭. ೫—೭; ೮. ೧೬—೨೪; ೧೨. ೧೮—೨೧.) ಈ ವರ್ತಮಾನಗಳ ತರುವಾಯ ಹತ್ತು ವರುಷಗಳ ಮಟ್ಟಿಗೂ ಅವನ ಚರಿತ್ರೆ ಏನೂ ತಿಳಿಯಲಿಲ್ಲ. ತರುವಾಯ ಅವನು ಕ್ರೇತ ದ್ವೀಪದಲ್ಲಿರುವ ಸಭೆಗಳನ್ನು ಕ್ರಮ ಪಡಿಸುವದಕ್ಕಾಗಿ ಪೌಲನಿಂದ ನೇಮಿಸಲ್ಪಟ್ಟನೆಂದು ಈ ಪತ್ರಿಕೆಯಿಂದ ತಿಳಿಯ ಬರುತ್ತದೆ. (೧. ೫, ೬.) ಅರ್ತೆಮನು ಅಥವಾ ತುಕಿಕನು ಅಲ್ಲಿಗೆ ಹೋಗಿ ಶೇರಿದಾಗ ನಿಕೊಪೋಲಿ ಎಂಬ ಪಟ್ಣದಲ್ಲಿರುವ ಪೌಲನನ್ನು ನೋಡುವದಕ್ಕೆ ಹೋಗಿರುವನೆಂದೂ, (೩. ೧೨.) ಪೌಲನು ರೋಮಪುರಿಗೆ ಹೋದ ತರುವಾಯವಾಗಲಿ, ಅದಕ್ಕೆ ಸ್ವಲ್ಪ ಮುಂಚೆ ಆಗಲಿ ಅವನು ದಲ್ಮಾತ್ಯಕ್ಕೆ ಹೋಗಿರುವನೆಂದೂ ತೋರುತ್ತದೆ. (೨ ತಿಮೊ. ೪. ೧೦.)

ಅರ್ಥದಲ್ಲಿಯೂ ಧೋರಣೆಯಲ್ಲಿಯೂ ಸಾರಾಂಶದಲ್ಲಿಯೂ ಈ ಪತ್ರಿಕೆಗೂ ತಿಮೊಥೆಯನ ಮೊದಲನೇ ಪತ್ರಿಕೆಗೂ ಬಹಳ ಸಮ್ಮಂಧವಿರುವದರಿಂದ ಈ ಎರಡೂ ಒಂದೇ ಕಾಲದಲ್ಲಿ ಬರೆಯಲ್ಪಟ್ಟವೆಂದು ಕೆಲವರು ನೆನಸುತ್ತಾರೆ. ಈ ವಿಷಯವನ್ನು ಕುರಿತು ತಿಮೊಥೆಯನ ಮೊದಲನೇ ಪತ್ರಿಕೆಯ ಪೀಠಿಕೆಯಲ್ಲಿ ಕೆಲವು ವಿವರಗಳನ್ನು ನೋಡ ಬಹುದು.

ಕ್ರೇತದಲ್ಲಿ ಸ್ಥಾಪಿಸಲ್ಪಟ್ಟ ಸಭೆಗಳನ್ನು ಕ್ರಮ ಪಡಿಸುವದಕ್ಕಿಂತ ಮುಂಚೆ ಪೌಲನು ಆ ಸ್ಥಳವನ್ನು ಬಿಟ್ಟು ಹೊರಡುವ ಹಾಗೆ ಸಂಭವಿಸಿದ್ದರಿಂದ ತೀತನು ಆ ಸಭೆಗಳನ್ನು ವಿಚಾರಿಸುವದಕ್ಕೆ ನೇಮಿಸಲ್ಪಟ್ಟನು. ಅವನಿಗೆ ಯೋಚನೆಯಾಗಿಯೂ, ಅವನು ಸೇವೆ ಮಾಡುವದಕ್ಕೆ ಪೌಲನ ಅನುಮತಿ ಇತ್ತೆಂದು ಎಲ್ಲರಿಗೂ ತಿಳಿಯುವ ಹಾಗೆಯೂ, ಈ ಪತ್ರಿಕೆಯು ಒಂದು ವೇಳೆ ೬೪ನೇ ವರುಷದಲ್ಲಿ ಬರೆಯಲ್ಪಟ್ಟಿತು. ಆದದರಿಂದ ತಿಮೊಥೆಯನಿಗೆ ಬರೆದ ಎರಡು ಪತ್ರಿಕೆಗಳ ಹಾಗೆಯೇ ಇದು ಸಹ ಎಲ್ಲರಿಗೂ ಅನುಕೂಲವೂ ಹುದುವೂ ಆದ ಕಟ್ಟಳೆಗಳುಳ್ಳ ಪತ್ರಿಕೆಯಾಗಿದೆ.

ತೀತನ ಕೆಲಸವು ಬಹು ಕಷ್ಟವುಳ್ಳದ್ದಾಗಿತ್ತು. ಪಂಚಾಶತ್ತಿನ ಹಬ್ಬಕ್ಕೆ ಯೆರೂಸಲೇಮಿಗೆ ಹೋಗಿದ್ದ ಕ್ರೇತ ದ್ವೀಪದವರು ತಮ್ಮ ದೇಶದಲ್ಲಿ ಸುವಾರ್ತೆ ಪ್ರಸಂಗಿಸಿ ಸಭೆಯನ್ನು ಸ್ಥಾಪಿಸಿದರೆಂದು ತೋರುತ್ತದೆ. (ಅಪೊ. ಕ್ರಿ. ೨. ೧೧.) ಹೀಗೆ ಸ್ಥಾಪಿಸಲ್ಪಟ್ಟ ಸಭೆಗಳಲ್ಲಿ ಯೆಹೂದ್ಯ ಮಾರ್ಗಕ್ಕೆ ಶೇರಿದ ಕಳ್ಳ ಬೋಧಕರಿಂದ ಕಲಹಗಳು ಸಂಭವಿಸಿದವು. (೧. ೧೦, ೧೧, ೧೪; ೩. ೯.) ಕ್ರೇತದವರ ಗುಣಾತಿಶಯಗಳು ಸತ್ಯಮಾರ್ಗಕ್ಕೆ ತಕ್ಕವುಗಳಲ್ಲ. ಅವರು ದ್ರವ್ಯಾಶೆಯೂ, ವಂಚನೆಯೂ, ಝಗಳವೂ, ದ್ರೋಹಚಿಂತೆಯೂ ಉಳ್ಳವರಾಗಿದ್ದರು. ಮತ್ತು ದುರ್ಭೋಗದಲ್ಲಿ ಆಸಕ್ತರಾಗಿಯೂ ಇದ್ದರೆಂದು ಆ ಕಾಲದಲ್ಲಿದ್ದ ಚರಿತ್ರಗಾರರು ಹೇಳಿದ್ದಾರೆ.

ಈ ಪತ್ರಿಕೆ ಕ್ಲುಪ್ತವೂ ಅರ್ಥಸಂಗ್ರಹವೂ, ಉಪದೇಶ, ನಡತೆ, ಕ್ರಮ ಮುಂತಾದ ವಿಷಯಗಳಲ್ಲಿ ಶ್ರೇಷ್ಠ ಬೋಧನೆಯೂ ಉಳ್ಳದ್ದಾಗಿದೆ. ಸಭೆಯ ಹಿರಿಯರಲ್ಲಿ ಇರ ಬೇಕಾದ ಲಕ್ಷಣಗಳೂ, (೧. ೧—೯.) ಕಳ್ಳಬೋಧಕರ ನಡವಡಿಕೆಗಳೂ, (೧೦—೧೬. ವ.) ನಾನಾ ಅಂತಸ್ತುಗಳುಳ್ಳವರಿಗೆ ತಕ್ಕ ಬುದ್ಧಿಬೋಧನೆಗಳೂ ಇದರಲ್ಲಿ ಅಡಗಿರುತ್ತವೆ. (೨. ೩. ಸಂಧಿಗಳು.)